Swabhimani Sahakari
Pages : 28 / 12₹

# ಸ್ವಾಭಿಮಾನಿ ಸಹಕಾರಿ

Volume - 19
Issue - 07
July - 2022

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ಆಷಾಢ ಮತ್ತು ರೈತ

ಮುಂಗಾರು ಮಳೆಯಾಗಿದೆ
ಬಯಲುಗಳ ಸೀಮೆಯಲಿ
ಕೆರೆ ತುಂಬಿ ತುಳುಕಾಡಿದೆ
ನಸು ನಗುತ ನಲಿವಿನಲಿ
ಕರೆ ನೀಡಿದೆ ದುಡಿ ಎಂದಿದೆ
ನೀ ದುಡಿ ಎಂದಿದೆ
ಉಳುವ ರೈತ ನಾನು
ಫಲವ ನೀಡೆ ನೀನು......
–ಆರ್. ಎನ್. ಜಯಗೋಪಾಲ್



ಜುಲೈ 2, 2022
100 ನೇ
ಅಂತರರಾಷ್ಟ್ರೀಯ ಸಹಕಾರ ದಿನ
ಧ್ಯೇಯ: ಸಹಕಾರ ಸಂಸ್ಥೆಗಳು ಉತ್ತಮ ವಿಶ್ವವನ್ನು ನಿರ್ಮಿಸಬಲ್ಲವು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5609

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1522



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

“ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳ ಪ್ರಾರಂಭವಾಗಿ ಈಗ 21 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಅಭೂತಪೂರ್ವ ಸಾಧನೆಗಳನ್ನು ಮಾಡಿದೆ. ದೇಶದ ರಾಜ್ಯದ ಮತ್ತು ಸಹಕಾರಿಗಳ ಮತ್ತು ಸಾರ್ವಜನಿಕರ ಮನ್ನಣೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಜೊತೆಗೆ ಕೆಲವು ಸಹಕಾರಿಗಳು ಈ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುವಂತೆ ಪ್ರಯತ್ನ ಮಾಡಿದ್ದೂ ಅವರ ಮೇಲೆ ಸಂಯುಕ್ತ ಸಹಕಾರಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿರುವುದು ತಮಗೆ ತಿಳಿದಿದೆ ಎಂದು ಭಾವಿಸುತ್ತೇನೆ.”

# “ಆಡಳಿತ ಪರಿಣಿತಿ ಸಾಧಿಸುವ ಸದಾವಕಾಶ”

**ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ನಮಸ್ಕಾರಗಳು.**

**ಆತ್ಮೀಯರೆ,**

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ ಈಗ 21 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಅಭೂತಪೂರ್ವ ಸಾಧನೆಗಳನ್ನು ಮಾಡಿದೆ. ದೇಶದ ರಾಜ್ಯದ ಮತ್ತು ಸಹಕಾರಿಗಳ ಮತ್ತು ಸಾರ್ವಜನಿಕರ ಮನ್ನಣೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಜೊತೆಗೆ ಕೆಲವು ಸಹಕಾರಿಗಳು ಈ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುವಂತೆ ಪ್ರಯತ್ನ ಮಾಡಿದ್ದೂ ಅವರ ಮೇಲೆ ಸಂಯುಕ್ತ ಸಹಕಾರಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿರುವುದು ತಮಗೆ ತಿಳಿದಿದೆ ಎಂದು ಭಾವಿಸುತ್ತೇನೆ.

ವಿಶೇಷವಾಗಿ ಸಂಯುಕ್ತ ಸಹಕಾರಿ ಕಳೆದ 5 ವರ್ಷಗಳ ಅವಧಿಯಲ್ಲಿ ಮಾಡಿರುವ ಸಾಧನೆಗಳು ಗಮನಾರ್ಹ. ಕೇಂದ್ರ ಕಛೇರಿಗೆ, ಬೆಳಗಾವಿ ಕಛೇರಿಗೆ, ಕಲಬುರಗಿ ಕಛೇರಿಗೆ ಕಟ್ಟಡಗಳು ಮೈಸೂರು ಕಛೇರಿಗೆ ನಿವೇಶನ ರಾಜ್ಯದಾದ್ಯಂತ ಸಂಪರ್ಕ ಕಛೇರಿಗಳು, ಪ್ರತಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿ ಅಧಿಕಾರಿಗಳು ಸಹಕಾರಿಗಳ ಜೊತೆಗೆ ನಿರಂತರ ಸಂಪರ್ಕ ಹೊಂದಿರುವುದು ಸಹಕಾರಿಗಳ ಪರಿವೀಕ್ಷಣೆ ಶಾಸನಾತ್ಮಕ ಕಾರ್ಯಗಳ ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದು ಹೀಗೆ ಹತ್ತು ಹಲವಾರು ಕಾರ್ಯಗಳನ್ನು ಮಾಡಿರುವುದಕ್ಕೆ ಮುಖ್ಯ ಕಾರಣ ಸಂಯುಕ್ತ ಸಹಕಾರಿಯು ಆಡಳಿತ ಮಂಡಳಿಯ ದೂರದೃಷ್ಟಿ ಹಾಗೂ ಕ್ರೀಯಾತ್ಮಕ ಕಾರ್ಯಚಟುವಟಿಕೆಗಳು, ಅವರಲ್ಲಿರುವ ಆಡಳಿತ ಪರಿಣಿತಿ, ಪ್ರತಿಯೊಂದು ಸಹಕಾರಿ ಸಂಸ್ಥೆಯ ಅಭಿವೃದ್ಧಿಗೆ ಉತ್ತಮ ಅರಿತ ನುರಿತ ಆಡಳಿತ ಮಂಡಳಿ ಅಗತ್ಯತೆಯನ್ನು ಸಂಯುಕ್ತ ಸಹಕಾರಿ ಮನಗಂಡು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಿಗೆ, ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ತರಬೇತಿಯನ್ನು ಕೇಂದ್ರದಲ್ಲಿ, ಪ್ರಾಂತೀಯ ಮಟ್ಟದಲ್ಲಿ ಹಾಗೂ ಜಿಲ್ಲಾಮಟ್ಟದಲ್ಲಿ ಹಮ್ಮಿಕೊಳ್ಳಲು ತೀರ್ಮಾನಿಸಿದೆ.

ಈ ಆಡಳಿತ ಪರಿಣಿತಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಹೊಂದಬೇಕು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಇದು ಅಗತ್ಯ ಎನ್ನುವ ದೃಷ್ಟಿಯಿಂದ ಪ್ರತಿವರ್ಷದಂತೆ (ಕಳೆದ ಎರಡು ವರ್ಷಗಳಿಂದ ಕೊರೊನಾ ಕಾರಣ ಹಮ್ಮಿಕೊಳ್ಳಲಾಗಿರಲಿಲ್ಲ.) ಈ ಸಲವೂ ಆಡಳಿತ ಪರಿಣಿತಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. 1ನೇ ತ್ರೈಮಾಸಿಕದಲ್ಲಿ ಮೊದಲನೇ ಕಾರ್ಯಕ್ರಮವೇ ಇದಾಗಿರುವುದು ವಿಶೇಷ. ಹೀಗಾಗಿ ಒಂದು ಕಾರ್ಯಕ್ರಮ 80 ಜನರಿಗೆ ಹಮ್ಮಿಕೊಳ್ಳುವುದು ಎಂದು ತೀರ್ಮಾನಿಸಿ ಕ್ರಮವಿಡಲಾಯಿತು. ಆದರೆ ಸಹಕಾರಿಗಳ ಪಾಲ್ಗೊಳ್ಳುವಿಕೆಯ ಆಸಕ್ತಿ ಉತ್ಸಾಹಗಳು ಹೆಚ್ಚಾಗಿ 240ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲು ನೊಂದಾಯಿಸಿದ ಹಿನ್ನೆಲೆಯಲ್ಲಿ ದಿನಾಂಕ 7,8 ದಿನಾಂಕ 15,16 ಹಾಗೂ ದಿನಾಂಕ 22,23 ಹೀಗೆ 3 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಯಿತು.

ಸಹಕಾರಿಗಳು ಅತ್ಯಂತ ಆಸಕ್ತಿಯಿಂದ ಈ ತರಬೇತಿ ಶಿಬಿರದಲ್ಲಿ ಭಾಗವಹಿಸಿರುವುದು ಈ ಕಾರ್ಯಕ್ರಮದ ಬಗ್ಗೆ ಉತ್ತಮ ಅಭಿಪ್ರಾಯವನ್ನು ಸೂಚಿಸಿರುವುದು ಸಂಯುಕ್ತ ಸಹಕಾರಿಗೆ ಹೆಚ್ಚಿನ ಶಕ್ತಿಯನ್ನು ಹಾಗೂ ಉತ್ಸಾಹವನ್ನು ತುಂಬಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆದ ಎಲ್ಲ ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......................................... 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......................................... 20–23
ಲೇಖನಗಳು :
ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳೆರಡನ್ನು ಎತ್ತಿ ಹಿಡಿಯುವ ಏಕೈಕ ವ್ಯವಸ್ಥೆಯೇ ಸಹಕಾರ ಚಳುವಳಿ ............. 24
ಆಹಾರ ಆರೋಗ್ಯ – 2 ........................... 25
ಅಂತರಾಷ್ಟ್ರೀಯ ಸಹಕಾರ ದಿನ ....... 27–28

# ಸಂಪಾದಕೀಯ

## ಕೇಂದ್ರದಲ್ಲಿ ಸಹಕಾರ ವಿಶ್ವವಿದ್ಯಾಲಯ : ಸ್ವಾಗತಾರ್ಹ ನಿರ್ಧಾರ

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಸ್ಥಾಪನೆಯಾಗಿ ಶ್ರೀ ಅಮಿತ ಶಾ ರವರು ಕೇಂದ್ರದ ಪ್ರಥಮ ಸಹಕಾರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ನಂತರ ಸಹಕಾರ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳು ಕಾಣುತ್ತಿರುವುದು ಸಹಕಾರಿಗಳು ಪಾರದರ್ಶಕತೆ ಕಾಣಬಹುದು ಎಂದು ಸಂತಸ ತಂದಿದೆ. ಸಹಕಾರ ಕ್ಷೇತ್ರಕ್ಕೆ 118 ವರ್ಷಗಳ ಇತಿಹಾಸ, ವಿಶ್ವದ ಅತ್ಯಂತ ದೊಡ್ಡ ಸಹಕಾರ ಚಳುವಳಿ. ಗಣನೀಯ ಸಾಧನೆ ಮಾಡಿದ ಹಲವಾರು ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು. ಉತ್ತಮ ಆರ್ಥಿಕ ಸಂಸ್ಥೆಗಳಾಗಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು. ಜನರ ಜೀವನ ಪದ್ಧತಿಯಾಗಿರುವ ಸಹಕಾರ ಕ್ಷೇತ್ರ ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಜವಾಬ್ದಾರಿಯುತ ಸ್ಥಾನವನ್ನು ನಿರ್ವಹಿಸುತ್ತ ಬಂದಿರುವುದು ಶ್ಲಾಘನೀಯ.

ದೇಶದಲ್ಲಿ 8.5 ಲಕ್ಷಗಳಿಗೂ ಹೆಚ್ಚು ಸಹಕಾರ ಸಂಸ್ಥೆಗಳಿವೆ. 40,688 ಕೋಟಿ (4,06,886.8 ಮಿಲಿಯನ್) ಪಾಲು ಬಂಡವಾಳವಿದೆ. 12,53,617 ಕೋಟಿ (1,25,36,174 ಮಿಲಿಯನ್) ದುಡಿಯುವ ಬಂಡವಾಳವಿದೆ. ಕೃಷಿ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಕೈಗಾರಿಕೆ, ಆರೋಗ್ಯ ಸಹಕಾರ ಬ್ಯಾಂಕಿಂಗ, ಸಾಮಾನ್ಯ ಕ್ರೆಡಿಟ್ ಸಹಕಾರ ಕಾನೂನುಗಳು ಸಂಬಂಧಿಸಿದ ಕಾನೂನುಗಳು ಮತ್ತು ಸಹಕಾರ ಪರಿಸರ ಮುಂತಾದವುಗಳಲ್ಲಿ ಸಾಕಷ್ಟು ಆಧುನಿಕತೆಯನ್ನು ಅಳವಡಿಸಿ ಪ್ರಗತಿಯನ್ನು ಸಾಧಿಸುವ ಅಗತ್ಯತೆ ಇದ್ದು ಇದಕ್ಕೆಲ್ಲ ವಿಷಯಗಳ ಬಗ್ಗೆ ಆಳವಾದ ಜ್ಞಾನ, ವೃತ್ತಿಪರತೆ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ವಿಶ್ವವಿದ್ಯಾಲಯದ ಮೂಲಕ ಅಳವಡಿಸುವ ಕಾರ್ಯ ಪರಿಣಾಮಕಾರಿಯಾಗಿ ನಡೆಯಬೇಕಿದೆ.

ಕೇಂದ್ರದಲ್ಲಿ ಈ ಇಲಾಖೆಯನ್ನು ಕೃಷಿ ಇಲಾಖೆಯ ಜೊತೆಗೆ ಕೂಡಿಸಿದ್ದ ಪರಿಣಾಮವಾಗಿ ಮತ್ತು ಸಹಕಾರ ರಾಜ್ಯಗಳ ವಿಷಯವಾಗಿರುವುದರಿಂದ ರಾಜ್ಯಗಳೆ ಈ ಬಗ್ಗೆ ಆಸಕ್ತಿ ವಹಿಸಿ ಕಾರ್ಯನಿರ್ವಹಿಸಲಿ ಎಂಬ ಧೋರಣೆಯನ್ನು ಕೇಂದ್ರ ತಳೆಯುತ್ತ ಬಂದು ಸಹಕಾರ ಕ್ಷೇತ್ರದ ಅಹವಾಲುಗಳನ್ನು ಕೇಳುವವರಿಲ್ಲದೆ ಸಹಕಾರ ಕ್ಷೇತ್ರ ಒಂದು ರೀತಿಯಲ್ಲಿ ಅನಾಥವಾದಂತಾಗಿತ್ತು. ಪ್ರಸ್ತುತ ಕೇಂದ್ರ ಸರಕಾರ ಈ ವಿಷಯದ ಬಗ್ಗೆ ಎಚ್ಚೆತ್ತುಕೊಂಡು ಕೇಂದ್ರದಲ್ಲಿ ಪ್ರತ್ಯೇಕ ಸಚಿವಾಲಯದ ಅಗತ್ಯತೆಯನ್ನು ಮನಗಂಡು ಪ್ರತ್ಯೇಕ ಸಚಿವಾಲಯವನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹ.

ಈ ಸಚಿವಾಲಯದ ನೇತೃತ್ವದಲ್ಲಿ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಅತ್ಯಂತ ಪ್ರಮುಖವಾಗಿರುವುದು ಕೇಂದ್ರದಲ್ಲಿ ಸಹಕಾರ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದಾಗಿರುವುದು ಅತ್ಯಂತ ಮಹತ್ವದ್ದಾಗಿದೆ. ಸಹಕಾರಿ ಕ್ಷೇತ್ರದ ಸಾಧನೆಗಳಿಗೆ ಕೆಲವು ಸಂದರ್ಭಗಳಲ್ಲಿ ಹಿನ್ನಡೆ ಎನಿಸುವುದು ಸಹಕಾರಿಗಳಲ್ಲಿ ಹೆಚ್ಚಿನ ಜ್ಞಾನ ಹಾಗೂ ವೃತ್ತಿಪರತೆಯ ಕೊರತೆಗಳನ್ನು ನಿವಾರಿಸಲು ವಿಶ್ವವಿದ್ಯಾಲಯ ನೆರವಾಗಲಿದೆ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಬಲ ಬಹುದಾಗಿದೆ ಎಂದು ಆಶಿಸಲಾಗಿದೆ.

ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಾಮನ್ ಸಾಫ್ಟ್‌ವೇರ್ ಹಾಗೂ ಕೇಂದ್ರೀಕೃತ ಗಣಕೀಕರಣ ವ್ಯವಸ್ಥೆಯನ್ನು ಕೇಂದ್ರದ ಸಹಕಾರ ಸಚಿವಾಲಯ ರೂಪಿಸಿದೆ

## ಮನಸ್ಸು ಮಿತ್ರ- ಶತ್ರುವಾಗಿಸಬೇಡ



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

ಒಬ್ಬ ಭಕ್ತನು ದೇವರನ್ನು ಕುರಿತು ಬಹಳ ಕಾಲ ತಪಸ್ಸು ಮಾಡುತ್ತಿದ್ದ. ಕಡೆಗೊಂದು ದಿನ ಭಗವಂತನು ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ. ಭಗವಂತನ ಕೈಯಲ್ಲಿ ಗದೆ ಕೂಡಾ ಇತ್ತು. ನಿನಗೇನು ವರ ಬೇಕು ಎಂದು ಭಗವಂತನು ಕೇಳಿದ ಕೂಡಲೇ ಆ ಭಕ್ತನು, "ಭಗವಂತಾ ! ನನ್ನ ಅಭಿವೃದ್ಧಿಗೆ ಅಡ್ಡವಾಗಿರುವ ಶತ್ರುಗಳನ್ನೆಲ್ಲಾ ನಿನ್ನ ಗದೆಯ ಮೂಲಕ ನೀನು ಚಚ್ಚಿ ಹಾಕಬೇಕು. ಇದೇ ನನ್ನ ಅಭಿಲಾಷೆ" ಎಂದು ಬೇಡಿಕೊಂಡ. ಭಗವಂತನು ಕಿರುನಗೆ ನಕ್ಕು, ಹಾಗೇ ಆಗಲಿ ಎಂದು ಹೇಳಿ ಕೂಡಲೇ ಮಾಯಾವಾದನು. ಸ್ವಲ್ಪ ಸಮಯದ ನಂತರ ಭಗವಂತನ ಗದೆ ಬೇಗವಾಗಿ ತೂರಿ ಬಂತು ಅದು ವರವನ್ನು ಕೋರಿಕೊಂಡ ಭಕ್ತನ ಮೇಲೆ ದಾಳಿ ಮಾಡಿ ಅವನ್ನು ಸಿಕ್ಕ ಸಿಕ್ಕಲ್ಲಿ ಚಚ್ಚತೊಡಗಿತು. ಭಕ್ತನು ನೋವಿನ ಬಾಧೆಯಿಂದ ಹಾಗೇ ನೆಲಕ್ಕೆ ಉರುಳಿ ಬಿದ್ದ. ಇದೇನಿದು ನಾನು ವರವನ್ನು ಬೇಡಿಕೊಂಡಿದ್ದೆ ತಪ್ಪಾಗಿ ಹೋಯಿತಲ್ಲ ಎಂದು ಗಟ್ಟಿಯಾಗಿ ಅಳತೊಡಗಿದನು. "ನಾನು ನನ್ನ ಅಭಿವೃದ್ಧಿಗೆ ಅಡ್ಡವಾಗಿರುವ ನನ್ನ ಶತ್ರುಗಳನ್ನು ಚಚ್ಚಿ ಹಾಕು ಎಂದು ಬೇಡಿಕೊಂಡರೆ. ನೀನು ಮರೆಗುಳಿತನದಿಂದ ನಿನ್ನ ಗದೆಯನ್ನು ನನ್ನ ಮೇಲೆಯೇ ಪ್ರಯೋಗಿಸುತ್ತೀಯಾ?" ಎಂದು ಭಗವಂತನನ್ನು ಶಪಿಸತೊಡಗಿದ. ಭಗವಂತನು ಪುನಃ ಪ್ರತ್ಯಕ್ಷನಾದನು. ಭಕ್ತನನ್ನು ನೋಡಿ ಹೀಗೆ ಹೇಳಿದ. "ಭಕ್ತಾ ! ನಿನ್ನ ಕೋರಿಕೊಂಡಂತೆಯೇ ನಾನು ನನ್ನ ಗದೆಯನ್ನು ಪ್ರಯೋಗಿಸಿದೆ. ನಾನು ಮರೆಗುಳಿತದಿಂದಾಗಲಿ ಅಥವಾ ಗುರುತಪ್ಪಿ ಹಾಗೆ ಮಾಡಲಿಲ್ಲ.

ಬೇರೆಯವರನ್ನು ಅವಮಾನಿಸಬೇಕು.......... ನೋಯಿಸಬೇಕು.......... ಚಿತ್ತುಮಾಡಬೇಕು........... ಅವರನ್ನು ನೆಲಕ್ಕುರುಳಿಸಬೇಕು....... ಅವರನ್ನು ನಾಶಮಾಡಬೇಕು ಎಂದು ಆಲೋಚಿಸುವ ನಿನ್ನ ಮನಸ್ಸೇ ನಿನ್ನ ಅಭಿವೃದ್ಧಿಗೆ ಶತ್ರು ! ನಿನ್ನ ಅಭಿವೃದ್ಧಿಗೆ ಅಡ್ಡವಾಗಿರುವುದು ನೀನೇ ! ಅದಕ್ಕೆ ನನ್ನ ಆಯುಧ್ಧವು ನಿನ್ನ ಮೇಲೆಯೇ ದಾಳಿಗಿಳಿಯಿತು !" ಎಂದು ವಿವರಿಸಿದ.

ಇದಕ್ಕೆ ಪೂರಕವಾಗಿ ಮನಸ್ಸನ್ನು ಹಿಡಿತದಲ್ಲಿ ಇಡದಿದ್ದರೆ, ನಮ್ಮ ಮನಸ್ಸನ್ನು ಸರಿಪಡಿಕೊಳ್ಳದಿದ್ದರೆ ಏನಾಗುತ್ತದೆಂಬುದಕ್ಕೆ ಒಂದು ಕಥೆಯನ್ನು ಹೇಳುತ್ತೇನೆ: ಒಂದು ರಾತ್ರಿ ಒಬ್ಬ ಬಡಿಗನ ಅಂಗಡಿಯಲ್ಲಿ ಒಂದು ಹಾವು ಬಂತು. ಅದು ಕತ್ತಲೆಯಲ್ಲಿ ಹರಿದಾಡುತ್ತೊದಂತೆ ಗರಗಸದ ಹತ್ತಿರ ಸುಳಿಯಿತು, ಗರಗಸದ ಮೊನಚಾದ ಒಂದು ಹಲ್ಲಿಗೆ ಅದರ ಬಾಲ ತಾಗಿ ಸ್ವಲ್ಪ ಗಾಯವಾಯತು. ತಕ್ಷಣವೇ ಅದು ತಿರುಗಿ ಗರಗಸವನ್ನು ಕಡಿಯಲು ಪ್ರಯತ್ನಿಸಿತು. ಅದರಿಂದ ಹಾವಿನ ಬಾಯಿಗೆ ಗಾಯವಾಯಿತು. ಗಾಯದಿಂದ ವಿಚಲಿತವಾದ ಹಾವು ಕೋಪದಲ್ಲಿ ಏನು ನಡೆಯುತ್ತಿದೆ ಎಂದು ಸರಿಯಾಗಿ ತಿಳಿಯದೇ ಗರಗಸ ತನ್ನನ್ನು ಕಚ್ಚುತ್ತಿದೆ ಎಂದು ಭಾವಿಸಿತು. ಗರಗಸವನ್ನು ಉಸಿರುಗಟ್ಟಿಸುವ ಉದ್ದೇಶದಿಂದ ಅದು ಗರಗಸವನ್ನು ಸುತ್ತಿಕೊಳ್ಳುವ ಶುರುಮಾಡಿತು. ಗಾಯ ಹೆಚ್ಚಾಂದತೆ ಗರಗಸವನ್ನು ಮತ್ತಷ್ಟು ಶಕ್ತಿ ಮೀರಿ ಬಿಗಿಯಾಗುಸಿತು. ಆದರೆ ಮೈಯಲ್ಲಾ ಗಾಯವಾಗಿದ್ದು ಹಾವಿಗೆ ಹೊರತು, ಗರಗಸಕ್ಕೇನೂ ಆಗಲಿಲ್ಲ. ಗಾಯದಿಂದ ಅತಿಯಾದ ರಕ್ತಸ್ರಾವವಾಗಿ ಹಾವು ಸತ್ತೇಹೋಯಿತು.

ಹೀಗೆ ಒಮ್ಮೊಮ್ಮೆ ನಮಗೆ ತೊಂದರೆ ಮಾಡಿದವರನ್ನು ಶಿಕ್ಷಿಸುವ ಭರದಲ್ಲಿ ನಾವು ಉದ್ವೇಗಗೊಳ್ಳುತ್ತೇವೆ. ಕೋಪದಲ್ಲಿ ಪ್ರತಿಕ್ರಿಯಿಸಿ ಅವರಿಗೆ ಹಾನಿ ಮಾಡಲು ಪ್ರಯತ್ನಿಸುತ್ತೇವೆ. ಆದರೆ ನಿಜವಾಗಿಯೂ ನಾವು ನಮಗೆ ಶಿಕ್ಷಸಿಕೊಂಡಿರುತ್ತೇವೆ. ನಮಗೆ ಹಾನಿಯಾಗಿರುತ್ತದೆ. ಕೆಲ ಅಹಿತಕರ ಘಟನೆಗಳನ್ನು. ಕೆಲವು ಸರಿ ಎನಿಸದ ವ್ಯಕ್ತಿಗಳನ್ನು ಅವರ ಕಟು ಮಾತುಗಳನ್ನು ನಿರ್ಲಕ್ಷಿಸುವುದು ಒಳ್ಳೆಯದು. ನಮಗಾದ ಕ್ಷಣಿಕ ನೋವಿನಿಂದ ನಾವು ತಪ್ಪು ಹೆಜ್ಜೆ ಇಟ್ಟು ಪರಿತಪಿಸುವಂತೆ ಆಗಬಾರದು. ದ್ವೇಷ, ಉದ್ವೇಗಕ್ಕಿಂತ ಪ್ರೀತಿ ಸಹನೆ ದೊಡ್ಡದು. ನಮ್ಮ ಮನಸ್ಸು ನಮಗೆ ಸ್ನೇಹಮಯಿಯಾಗಿರುವಂತೆ ನೋಡಿಕೊಳ್ಳಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 22117 ಆಗಿರುತ್ತದೆ. ಇವುಗಳ ಪೈಕಿ 12920 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,197.

**ಜೂನ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 535 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 759.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 4682 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 748 ಪ್ರಕರಣಗಳು ಇತ್ಯರ್ಥಗೊಂಡಿದ್ದು, 3934 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜೂನ್ ತಿಂಗಳಿನಲ್ಲಿ 372 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

## 2ನೇ ಜುಲೈ - ಅಂತರರಾಷ್ಟ್ರೀಯ ಸಹಕಾರ ದಿನ

## 2022 ಧ್ಯೇಯ – "ಸಹಕಾರ ಸಂಸ್ಥೆಗಳು ಉತ್ತಮ ವಿಶ್ವವನ್ನು ನಿರ್ಮಿಸಬಲ್ಲವು"

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸಹಕಾರ ಸಂಸ್ಥೆಗಳು ಉತ್ತಮ ವಿಶ್ವವನ್ನು ನಿರ್ಮಿಸಬಲ್ಲವು" ಎಂಬುದನ್ನು ದೃಢೀಕರಿಸಲು ಈ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

# International Day of Cooperatives 2022

## Theme : Cooperatives Build a Better World

On July 2, cooperatives all around the world will celebrate the 100th International Day of Cooperatives (#CoopsDay). A decade on from the UN International Year of Cooperatives, which showcased the unique contribution of cooperatives to making the world a better place, this year's #CoopsDay slogan --"Cooperatives Build a Better World"-- echoes the theme of the International Year.

"Cooperatives are answering the wake-up call of UN Secretary-General Antonio Guterres, who warned that the world is 'on the edge of an abyss — and moving in the wrong direction', and exclaimed that 'to restore trust, and inspire hope, we need cooperation, we need dialogue, we need understanding'. For nearly two centuries, cooperatives have been pulling in this direction. This was amply highlighted at the 33rd World Cooperative Congress, held by the International Cooperative Alliance in December 2021, which focused a spotlight on how their shared identity is moving cooperatives to take action to address the world's problems" declared Bruno Roelants, Director General of the ICA.

The ICA invites cooperators everywhere to spread the word about how our human-centred business model, inspired by the cooperative values of self-help, self-responsibility, democracy, equality, equity, and solidarity and the ethical values of honesty, openness, social responsibility and caring for others, is building a better world.

Operating all around the world, in many different sectors of economy, cooperatives have proven themselves more resilient to crises than the average. They foster economic participation, fight against environmental degradation and climate change, generate good jobs, contribute to food security, keep financial capital within local communities, build ethical value chains, and, by improving people's material conditions and security, contribute to positive peace.

"Cooperatives are the only enterprise model with globally agreed principles that rest on a foundation of shared ethical values" added Bruno Roelants.

The ICA calls on cooperators and partners around the world to get ready to celebrate #CoopsDay on 2 July and to show the world how Cooperatives Build a Better World.

The 2022 Coopsday actions' pack including the logo, key messages and other digital resources will be available soon.

### About the International Day of Cooperatives

Marked by cooperatives worldwide since 1923 and officially proclaimed by the United Nations General Assembly on the centenary of the ICA in 1995, the International Day of Cooperatives is celebrated annually on the

first Saturday of July.

The aim of #CoopsDay is to increase awareness of cooperatives and promote the movement's ideas of international solidarity, economic efficiency, equality, and world peace. Since 1995, the ICA and the United Nations through Committee for the Promotion and Advancement of Cooperatives (COPAC) have jointly set the theme for the celebration of #CoopsDay.

Through #CoopsDay, local, national and global policymakers, civil-society organisations and the public in general can learn about the contribution of cooperatives to a secure future for all.



## ಸಹಕಾರಿಗಳ ನಿಬಂಧಕರಾಗಿ ಡಾ. ವೆಂಕಟೇಶ್ ಎಂ.ವಿ ಅಧಿಕಾರ ಸ್ವೀಕಾರ

**ಬೆಂಗಳೂರು :** ಸಹಕಾರಿ ಇಲಾಖೆಯ ಸಹಕಾರಿಗಳ ನಿಬಂಧಕರಾಗಿ ಶ್ರೀ ಡಾ. ವೆಂಕಟೇಶ್ ಎಂ.ವಿ ಇವರನ್ನು ಸರ್ಕಾರ ನೇಮಕ ಮಾಡಿದೆ.



## ಸಹಕಾರಿಗಳ ನಿಬಂಧಕರಾದ ಶ್ರೀ ಜಿಯಾಉಲ್ಲಾ ಇವರಿಗೆ ಬೀಳ್ಕೊಡುಗೆ

**ಬೆಂಗಳೂರು :** 30.06.2022 ರಂದು ಸಹಕಾರಿಗಳ ನಿಬಂಧಕರಾಗಿದ್ದ ಶ್ರೀ ಎಸ್. ಜಿಯಾಉಲ್ಲಾ ರವರು ಸೇವೆಯಿಂದ ವಯೋ ನಿವೃತ್ತರಾಗಿರುವ ಹಿನ್ನೆಲೆಯಲ್ಲಿ ಸದರಿಯವರ ಬೀಳ್ಕೊಡುಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

## ದಾವಾ ಪಂಚಾಯ್ತಿ ನ್ಯಾಯಾಲಯ ಪೀಠಾಧಿಕಾರಿಯಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಬಿ. ಜಯಪ್ರಕಾಶ್ ನೇಮಕ



**ಬೆಂಗಳೂರು :** ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಬೆಂಗಳೂರು ಪೀಠಕ್ಕೆ ಶ್ರೀ ಬಿ ಜಯಪ್ರಕಾಶ್, ಸಹಕಾರ ಸಂಘಗಳ ಜಂಟಿನಿಬಂಧಕರು ಇವರನ್ನು ನೇಮಕ ಮಾಡಿ ಆದೇಶಿಸಲಾಗಿದೆ. ಇವರನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ಮಾಡಿ ಅಭಿನಂದಿಸಿದರು.

ಇದುವರೆಗೆ ಶ್ರೀ ಪಿ ಶಶಿಧರ, ಉಪನಿಬಂಧಕರು ಇವರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಬೆಂಗಳೂರು ಇದರ ಪೀಠಾಧಿಕಾರಿಯಾಗಿ ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

## 4ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಪರೀಕ್ಷೆಗಳು ಮುಕ್ತಾಯ


ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಪ್ರಾರಂಭಿಸಿರುವ 4ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸನ್ನು ದಿನಾಂಕ 01ನೇ ಜನವರಿ 2022 ರಂದು ಪ್ರಾರಂಭಿಸಲಾಗಿದೆ. ಈ ಕೋರ್ಸಿನಲ್ಲಿ ಒಟ್ಟು 535 ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದರು. 4ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಪರೀಕ್ಷೆಗಳನ್ನು ದಿನಾಂಕ 25, 26ನೇ ಜೂನ್ ಹಾಗೂ 03 ನೇ ಜುಲೈ 2022ರಂದು ಬೆಂಗಳೂರು, ಶಿವಮೊಗ್ಗ, ಪುತ್ತೂರು, ಕಾರವಾರ, ಚಿಕ್ಕೋಡಿ, ಮುಧೋಳ, ಹೊಸಪೇಟೆ ಹಾಗು ಬಳ್ಳಾರಿ ಒಟ್ಟು 8 ಕೇಂದ್ರಗಳಲ್ಲಿ ಶಿಸ್ತು ಹಾಗೂ ಪಾರದರ್ಶಕತೆಯಿಂದ ನಡೆಸಲಾಗಿತ್ತು.

**ಕೋರ್ಸಿನ ಪರೀಕ್ಷೆಯಲ್ಲಿ 8 ಕೇಂದ್ರಗಳಲ್ಲಿ ಭಾಗವಹಿಸಿ ಅಭ್ಯರ್ಥಿಗಳ ವಿವರ**

| | | | | | | | | |
|---|---|---|---|---|---|---|---|---|
| 1. ಬೆಂಗಳೂರು | – | 56 | 2. ಶಿವಮೊಗ್ಗ | – | 46 | 3. ಪುತ್ತೂರು | – | 88 |
| 4. ಕಾರವಾರ | – | 40 | 5. ಚಿಕ್ಕೋಡಿ | – | 67 | 6. ಮುಧೋಳ | – | 95 |
| 7. ಹೊಸಪೇಟೆ | – | 39 | 8. ಬಳ್ಳಾರಿ | – | 62 | | | |

**ಒಟ್ಟು 493 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿರುತ್ತಾರೆ.**

## ಬ್ಯಾಂಕ್ ಗ್ರಾಹಕರಿಗೆ ಭಾರಿ ಸಂತಸದ ಸುದ್ದಿ ಪ್ರಕಟಿಸಿದ ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ



ಸಹಕಾರಿ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ ಮಹತ್ವದ ಘೋಷಣೆ ಮಾಡಿರುವ ಕೇಂದ್ರ ಸಹಕಾರ ಸಚಿವ ಶ್ರೀ ಅಮಿತ್ ಶಾ, ಸಹಕಾರಿ ಬ್ಯಾಂಕ್‌ಗಳ ಗಾರ್ಹಕರಿಗೆ ಸರ್ಕಾರದ ಕಲ್ಯಾಣ ಯೋಜನೆಗಳ ಪ್ರಯೋಜನಗಳನ್ನು ತಲುಪಿಸಲು ಶೀಘ್ರದಲ್ಲಿಯೇ ಸಹಕಾರಿ ಬ್ಯಾಂಕ್‌ಗಳನ್ನು ಡೈರೆಕ್ಟ್ ಬೆನಿಫಿಟ್ ಟ್ರಾನ್ಸರ್ ನೊಂದಿಗೆ ಸಂಪರ್ಕಿಸಲಾಗುವುದು ಎಂದು ಘೋಷಿಸಿದ್ದಾರೆ. ಅಂದರೆ, ಇದೀಗ ಸರ್ಕಾರದ ಎಲ್ಲಾ ಕಲ್ಯಾಣ ಯೊಜನೆಗಳ ಲಾಭ ಸಹಕಾರಿ ಬ್ಯಾಂಕ್ ಗ್ರಾಹಕರ ಖಾತೆಗಳಿಗೂ ಕೂಡ ನೇರ ವರ್ಗಾವಣೆಯಾಗಲಿದೆ. ಇನ್ಮುಂದೆ ಸಹಕಾರಿ ಬ್ಯಾಂಕ್‌ನ ಗ್ರಾಹಕರಿಗೂ ಕೂಡ ಸರ್ಕಾರದ ಎಲ್ಲಾ ಕಲ್ಯಾಣ ಯೋಜನೆಗಳ ಲಾಭ ಸಿಗಲಿದೆ. ಇದಕ್ಕಾಗಿ, ಸಹಕಾರಿ ಬ್ಯಾಂಕ್‌ಗಳನ್ನು ನೇರ ಬ್ಯಾಂಕ್ ವರ್ಗಾವಣೆ (ಡಿಬಿಟಿ) ಯೊಂದಿಗೆ ಲಿಂಕ್ ಮಾಡಲಾಗುತ್ತಿದೆ.

ಪ್ರಸ್ತುತ, ಸರ್ಕಾರದ 52 ಸಚಿವಾಲಯಗಳು ನಡೆಸುತ್ತಿರುವ 300 ಯೋಜನೆಗಳ ಲಾಭವನ್ನು ಫಲಾನುಭವಿಗಳಿಗೆ ಡಿಬಿಟಿ ಮೂಲಕ ರವಾನಿಸಲಾಗುತ್ತಿದೆ, ಅಂದರೆ, ಈಗ ಈ ಎಲ್ಲಾ ಯೋಜನೆಗಳ ಪ್ರಯೋಜನವನ್ನು ಸಹಕಾರಿ ಬ್ಯಾಂಕ್‌ಗಳ ಗ್ರಾಹಕರು ಪಡೆಯಲಿದ್ದಾರೆ.

## ಸಹಕಾರ ಡಿಪ್ಲೊಮಾ ಓದಿದವರಿಗೆ ಉದ್ಯೋಗ ಮೀಸಲು - ಶ್ರೀ ಎಸ್.ಟಿ ಸೋಮಶೇಖರ



ಸಹಕಾರ ವಿಷಯದಲ್ಲಿ ಡಿಪ್ಲೊಮಾ ಪದವಿ ಪಡೆದವರಿಗೆ ಸಹಕಾರ ಕ್ಷೇತ್ರದ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶ ನೀಡುವ ವಿಧೇಯಕವನ್ನು ಮುಂದಿನ ಅಧಿವೇಶವದಲ್ಲಿ ಮಂಡಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ ಸೋಮಶೇಖರ ಹೇಳಿದ್ದಾರೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಆಯೋಜಿಸಿದ್ದ 100ನೇ ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಕ್ಷೇತ್ರದ ಬಗ್ಗೆ ಜ್ಞಾನ ಹೊಂದಿರುವ ವೃತ್ತಿಪರರನ್ನು ಸಹಕಾರಿ ಸಂಘ ಸಂಸ್ಥೆಗಳಿಗೆ ನೇಮಿಸುವ ಅಗತ್ಯವಿದೆ. ಈ ಹಿನ್ನಲೆಯಲ್ಲಿ ಕಾಯ್ದೆಯಲ್ಲಿ ತಿದ್ದುಪಡಿ ತರಲು ಮುಂದಾಗಿದ್ದೇವೆ. ಸಹಕಾರ ಮಹಾಮಂಡಳ ನಡೆಸುತ್ತಿರುವ ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಗೊಳೀಸಲಾಗುವುದು ಎಂದು ತಿಳಿಸಿದರು.

ಗ್ರಾಮೀಣ ಮತ್ತು ನಗರ ಸಹಕಾರಿಗಳ ಆರೋಗ್ಯ ರಕ್ಷಣೆಯಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಅಕ್ಟೋಬರ್ 2 ರಿಂದ ಮರು ಜಾರಿಗೊಳಿಸಲಾಗುವುದು. ನಂದಿನಿ ಕ್ಷೀರ ಕೇಂದ್ರ ಸ್ಥಾಪನೆಗೆ ಅನುಮತಿ ಕೋರಿ ಕೇಂದ್ರ ಹಣಕಾಸು ಸಚಿವರಿಗೆ ಪತ್ರ ಬರೆದಿರುವುದಾಗಿ ಸಚಿವರು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹಕಾರ ಮಹಾಮಂಡಳದ ಕಾರ್ಯಚಟುವಟಿಕೆಗಳನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸಲು ಸಹಕಾರ ಕ್ಷೇತ್ರದ ಸಮಗ್ರ ಮಾಹಿತಿ ಸಂಗ್ರಹಿಸುವ ಅಗತ್ಯವಿದ ಎಂದರು. ಸಹಕಾರ ಸಂಘಗಳ ನಿಬಂಧಕರಾದ ಡಾ. ಎಂ.ವಿ ವೆಂಕಟೇಶ, ಮೈಸೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕ ಯಶವಂತ ಡೋಂಗ್ರೆ, ವ್ಯವಸ್ಥಾಪಕ ನಿರ್ದೇಶಕ ಎಸ್. ಅರಳಿ ಸೂರ್ಯಕಾಂತ ಉಪಸ್ಥಿತರಿದ್ದರು.

## ಸಂಪನ್ಮೂಲಗಳ ವ್ಯಕ್ತಿಗಳ ಸಭೆ



**ಬೆಂಗಳೂರು** : ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಸಂಪನ್ಮೂಲ ವ್ಯಕ್ತಿಗಳ ಸಭೆ ದಿನಾಂಕ 04.06.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಯವರು ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ರವರು ಸ್ವಾಗತ ಕೋರಿ, ಪ್ರಾಸ್ತಾವಿಕ ಮಾತನಾಡಿ ಸಂಯುಕ್ತ ಸಹಕಾರಿ ರಾಜ್ಯ ಮಟ್ಟದಲ್ಲಿ ಪ್ರಾಂತೀಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಪ್ರತಿ ವರ್ಷ ನೂರಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇದೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ರಾಜ್ಯಾದಾದ್ಯಂತ ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ 31 ಸಂಪನ್ಮೂಲ ವ್ಯಕಿಗಳು ಭಾಗವಹಿಸುತ್ತ ಸಹಕರಿಸುತ್ತ ಬಂದಿದ್ದೀರಿ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಬಗ್ಗೆ, ಅವುಗಳ ಗುಣಮಟ್ಟವನ್ನು ಇನ್ನೂ ಹೆಚ್ಚಿಸುವ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯ ಪಡೆಯುವ ತಮ್ಮಿಂದ ಮಾರ್ಗದರ್ಶನ ಪಡೆಯುವ ನಿಟ್ಟಿನಲ್ಲಿ ಈ ಸಭೆ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ವಿಶೇಷವಾಗಿ ಸಂಯುಕ್ತ ಸಹಕಾರಿಯ ಪ್ರಾರಂಭಿಸಿರುವ ಡಿ.ಸಿ.ಬಿ.ಎಂ. ಕಾರ್ಯಕ್ರಮದ ವಿಷಯಗಳು, ಪಠ್ಯಕ್ರಮ, ಸಂಪರ್ಕ ವರ್ಗಗಳ ನಡೆಸುವಿಕೆ, ಪರೀಕ್ಷಾ ವಿಧಾನ ಮುಂತಾದವುಗಳ ಬಗ್ಗೆ ತಮ್ಮ ಮಾರ್ಗದರ್ಶನ ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಎಸ್.ಎ ಸಿದ್ದಾಂತಿ, ಡಾ. ನಂದೀಶ್ ಹಿರೇಮಠ, ಶ್ರೀ ವೈ.ವಿ ಗುಂಡೂರಾವ್, ಶ್ರೀಮತಿ ಮೀನಾಕ್ಷಿ ಖಂಡೀಮಠ, ಶ್ರೀ ಸುಬ್ರಮಣ್ಯ ಕುಳೇದ, ಸಂಯುಕ್ತ ಸಹಕಾರಿಯ ಅಧಿಕಾರಿಯು ಸೇರಿದಂತೆ 31 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ತಮ್ಮ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ವಿಶೇಷವಾಗಿ ಡಿ.ಸಿ.ಬಿ.ಎಂ. ಕೋರ್ಸ್‌ಗೆ ಸಂಬಂಧಿಸಿದ ವಿಷಯಗಳು, ಪಠ್ಯಕ್ರಮದ ಬಗ್ಗೆ ಒಂದು ವಿಶೇಷ ಕೋರ್ ಕಮಿಟಿಯನ್ನು ರಚಿಸಿ ಅವರ ಮಾರ್ಗದರ್ಶನದಂತೆ ಮುಂಬರುವ ಕೋರ್ಸ್‌ಗಳನ್ನು ನಡೆಸಲು ಸಲಹೆ ನೀಡಿದರು. ಶ್ರೀ ಕೆ. ರಘುನಂದನ್ ರವರು ವಂದನಾರ್ಪನೆ ಮಾಡಿದರು.

## 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯ 3 ಕಾರ್ಯಕ್ರಮಗಳು ಅತ್ಯಂತ ಪರಿಣಾಮಕಾರಿ.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಏರ್ಪಡಿಸಿದ್ದ 3 ತರಬೇತಿ ಕಾರ್ಯಕ್ರಮಗಳು ಅತ್ಯಂತ ಪರಿಣಾಮಕಾ–ರಿಯಾಗಿ ಜರುಗಿದವು. ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿರುವುದು. ಪ್ರಾರಂಭದಲ್ಲಿ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಉದ್ದೇಶಿಸಲಾಗಿತ್ತು. ಆದರೆ ಸೌಹಾರ್ದ ಸಹಕಾರಿಗಳ ಭಾಗವಹಿಸುವಿಕೆಯ ಉತ್ಸಾಹದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಿಕೆ ಆಸಕ್ತಿಯಿಂದಾಗಿ 3 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಒಂದನೇ ಕಾರ್ಯಕ್ರಮವನ್ನು ದಿನಾಂಕ 07 & 08 ಜೂನ್ ಎರಡನೇ ಕಾರ್ಯಕ್ರಮವನ್ನು ದಿನಾಂಕ 15 & 16 ಹಾಗೂ 3ನೇ ಕಾರ್ಯಕ್ರಮವನ್ನು ದಿನಾಂಕ 22 & 23 ಜೂನ್ ರಂದು ಯಶಸ್ವಿಯಾಗಿ ನಡೆಸಲಾಯಿತು. ಒಂದನೇ ಕಾರ್ಯಕ್ರಮವನ್ನು 48 ಸಹಕಾರಿಗಳಿಂದ 86 ಪ್ರತಿನಿಧಿಗಳು 2ನೇ ಕಾರ್ಯಕ್ರಮದಲ್ಲಿ 42 ಸಹಕಾರಿಗಳಿಂದ 79 ಪ್ರತಿನಿಧಿಗಳು 3ನೇ ಕಾರ್ಯಕ್ರಮದಲ್ಲಿ 64 ಸಹಕಾರಿಗಲಿಂದ 91 ಪ್ರತಿನಿಧಿಗಳು ಒಟ್ಟಾರೆ 154 ಸಹಕಾರಿಗಳಿಂದ 256 ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮ ಪ್ರಯೋಜನೆ ಪಡೆದರು.

### ಒಂದನೇ ಕಾರ್ಯಕ್ರಮ 07 & 08 ಜೂನ್ 2022 :

#### ತರಬೇತಿಯಿಂದಲೇ ಆಡಳಿತ ಸುಧಾರಣ – ಶ್ರೀ ಗುರುಸ್ವಾಮಿ

ದಿನಾಂಕ 07 & 08 ಜೂನ್ ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮವನ್ನು ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ರಾಜ್ಯ ಗ್ರಾಹಕರ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಗುರುಸ್ವಾಮಿಯವರು ಉದ್ಘಾಟಿಸಿ ಮಾತನಾಡುತ್ತ ಯಾವುದೇ ಒಂದು ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಅಂದರೆ ಅದರ ಆಡಳಿತ ವ್ಯವಸ್ಥೆ ಉತ್ತಮವಾಗಿದೆ ಎಂದು ತಿಳಿಯಬೇಕು. ಆಡಳಿತದ ಚುಕ್ಕಣಿ, ಹಿಡಿದಿರುವವರು ಸಂಸ್ಥೆಯ ನೀತಿ, ನಿಯಮ, ಸಂಬಂಧಿಸಿದ ಕಾನೂನು ಮತ್ತು ಪ್ರಚಲಿತ ವಿಷಯಗಳ ಬಗ್ಗೆ ಜ್ಞಾನ ಹೊಂದಿದಾಗ ಮಾತ್ರ ಆಡಳಿತವನ್ನು ಉತ್ತಮವಾಗಿಸಲು ಸಾಧ್ಯ. ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 5500ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವುದಲ್ಲಿ ನಿರ್ದೇಶಕ ಮಂಡಳಿಯವರಿಗೆ ಈ ರೀತಿ ತರಬೇತಿ ಕಾರ್ಯಕ್ರಮವನ್ನು ನೀಡುವ ಅಗತ್ಯತೆ ಇದೆ. ಸಂಯುಕ್ತ ಸಹಕಾರಿ ಈ ನಿಟ್ಟಿನಲ್ಲಿ ಉತ್ತಮವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಶ್ಲಾಘನೀಯ ಕಾರ್ಯಮಾಡುತ್ತದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರಡ್ಡಿ ಯವರು, ರಾಜ್ಯದ ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ ಎಂಬ ಧ್ಯೇಯದೊಂದಿಗೆ ಸಂಯುಕ್ತ ಸಹಕಾರಿ ಕಾರ್ಯನಿರ್ವಹಿಸುತ್ತಿದೆ. ಸಂಯುಕ್ತ ಸಹಕಾರಿಯ ಪ್ರಮುಖ ಕಾರ್ಯಚಟುವಟಿಕೆಗಳಲ್ಲಿ ಒಂದಾದ ಶಿಕ್ಷಣ, ತರಬೇತಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತ ಬಂದಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 5609 ಸಹಕಾರಿಗಳು, 62 ಲಕ್ಷ ಸದಸ್ಯರು, 1047 ಕೋಟಿ ಶೇರು ಬಂಡವಾಳ, 30,872 ಕೋಟಿ ದುಡಿಯುವ ಬಂಡವಾಳ, 20,596 ಸಾಲ ನೀಡಲಾಗಿದ್ದು 365 ಕೋಟಿ ಲಾಭಾಂಶ ಹಾಗೂ 55,000 ಸಾವಿರ ಜನ–ರಿಗೆ ಉದ್ಯೋಗ ನೀಡಲಾಗಿದೆ. ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಸ್ವಂತ ಕಟ್ಟಡ, ಬೆಳಗಾವಿ ಪ್ರಾಂತೀಯ ಕಛೇರಿಗೆ ಸ್ವಂತ ಕಟ್ಟಡ, ಕಲಬುರಗಿ ಕಛೇರಿಗೆ ಸ್ವಂತ ಕಟ್ಟಡ, ಮೈಸೂರು ಕಛೇರಿಗೆ ನಿವೇಶನ ಖರೀದಿಸಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಸಂಪರ್ಕ ಕಛೇರಿಗಳು, ಪ್ರತಿ ಜಿಲ್ಲೆಯಲ್ಲಿ ಸಂಪರ್ಕ ಕಛೇರಿಗಳು, ಪ್ರತಿ ಜಿಲ್ಲೆಯಲ್ಲೂ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು, ಜಿಲ್ಲಾ ಸಂಯೋಜಕರು ಕಾರ್ಯನಿರ್ವಹಿಸುತ್ತ ಈ ಕ್ಷೇತ್ರವನ್ನು ಮುನ್ನಡೆಸುತ್ತಿದ್ದಾರೆ

ಎಂದು ತಿಳಿಸಿದರು. ಪ್ರಾರಂಭದಲ್ಲಿ ಶ್ರೀಮತಿ ವಿಜಯಶ್ರೀ ಹಾಗೂ ಶ್ರೀಮತಿ ಹರ್ಷಪ್ರಭ ಇವರುಗಳಿಂದ ಪ್ರಾರ್ಥನೆಯಾದ ನಂತರ ಉಪಪ್ರಧಾನ ವ್ಯವಸ್ಥಾಪಕ ಶ್ರೀ ರಘುನಂದನ ಕೆ. ರವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ್ ಇವರು ಪ್ರಾಸ್ತಾವಿಕ ಮಾತುಗಳನ್ನು ಹೇಳುತ್ತ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತೃತ್ವದಲ್ಲಿ ವಹಿಸಿದರು ಸಂಯುಕ್ತ ಸಹಕಾರಿ ಪ್ರತಿ ವರ್ಷ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣೀತಿ ತರಬೇತಿಯನ್ನು ಹಮ್ಮಿಕೊಳ್ಳುತ್ತ ಬಂದಿದೆ. ಕಳೆದ 2 ವರ್ಷಗಳಿಂದ ಕೊರೊನಾದಿಂದಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರಲಿಲ್ಲ. ಮುಂಬರುವ ದಿನಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಾಂತೀಯ ಹಾಗೂ ಜಿಲ್ಲಾ ಮಟ್ಟಗಳಲ್ಲೂ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮದಲ್ಲಿ ಉತ್ತಮ ವಿಷಯಗಳ ಆಯ್ಕೆಮಾಡಲಾಗಿದೆ. ಅತ್ಯಂತ ಹಿರಿಯ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆಮಾಡಲಾಗಿದೆ. ಪ್ರತಿನಿಧಿಗಳು ಇದರ ಪೂರ್ಣ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್ ಗುಂಡೂರಾವ್ ಮತ್ತು ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ನಿವೃತ್ತ ನಿರ್ದೇಶಕ ಶ್ರೀ ಎಸ್.ಎ ಸಿದ್ದಾಂತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಸಂಯುಕ್ತ ಸಹಕಾರಿಯ ಕಾನೂನು ವಿಭಾಗದ ಅಧಿಕಾರಿ ಶ್ರೀ ಮಹಾಂತಪ್ಪ ವಂದಾನಾರ್ಪನೆ ಸಲ್ಲಿಸಿದರು.

2 ದಿನದ ಕಾರ್ಯಕ್ರಮದಲ್ಲಿ ಡಾ. ಎಸ್ ಸಿದ್ದಾಂತಿಯವರು ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ನಿರ್ದೇಶಕರ ಪಾತ್ರ ಡಾ. ನಂದೀಶ್ ಹಿರೇಮಠ ಸಹಕಾರ ಸಂಸ್ಥೆಗಳನ್ನು ಉನ್ನತೀಕರಿಸುವಲ್ಲಿ ನಿರ್ದೇಶಕರ ಪಾತ್ರ, ಡಾ. ಹರೀಶ ಇವರಿಂದ ಜೀವನ ಸಬಲತೆ, ಶ್ರೀ ಶರಣಗೌಡ ಜಿ. ಪಾಟೀಲ ಇವರಿಂದ ಸಹಕಾರ ಕಾಯ್ದೆಯ ಮುಖ್ಯಾಂಶಗಳು ಮತ್ತು ಇತ್ತೀಚಿನ ತಿದ್ದುಪಡಿಗಳು, ಡಾ. ಯಶವಂತ ಡೊಂಗ್ರೆಯವರಿಂದ ಸಹಕಾರ ಕ್ಷೇತ್ರದ ಪ್ರಚಲಿತ ವಿದ್ಯಾಮಾನಗಳು ಮತ್ತು ಸುಸ್ಥಿರ ಅಭಿವೃದ್ಧಿ-ನಿರ್ದೇಶಕರ ಪಾತ್ರ, ಶ್ರೀಮತಿ ಮೀನಾಕ್ಷಿ ಖಂಡೀಮಠ ಇವರು ಆಂತರಿಕ ಸಂಬಂಧಗಳ ನಿರ್ವಹಣೆ ವಿಷಯಗಳ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಕೊನೆಯ ಅವಧಿಯಲ್ಲಿ ಪ್ರತಿನಿಧಿಗಳ ಜೊತೆಗೆ ಚರ್ಚೆ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಹಂಚಿಕೊಳ್ಳಲಾಯಿತು. ಕಾರ್ಯಕ್ರಮ ಅತ್ಯಂತ ಉತ್ತಮಮಟ್ಟದಾಗಿತ್ತು ಎಂದು ಪ್ರತಿನಿಧಿಗಳು ಮುಕ್ತಕಂಠದಿಂದ ಶ್ಲಾಘಿಸಿದರು.

**ಎರಡನೇ ಕಾರ್ಯಕ್ರಮ ದಿನಾಂಕ 15 & 16, ಜೂನ್ 2022 :**

2ನೇ ಕಾರ್ಯಕ್ರಮವನ್ನು ದಿನಾಂಕ 15 & 16 ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮವನ್ನು ಡಾ. ಸಿ ಸೋಮಶೇಖರ ಐ.ಎ.ಎಸ್(ನಿ), ಅಧ್ಯಕ್ಷರು ಕರ್ನಾಟಕ ಗಡಿ ಹಾಗೂ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಯವರು ಉದ್ಘಾಟಿಸಿ ಮಾತನಾಡುತ್ತ ಅರಿವೇ ಗುರು ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಹಾಗೂ ಕಾರ್ಯರೂಪಕ್ಕೆ ತರುವಾಗ ತೆಗೆದುಕೊಳ್ಳಬಹುದಾದ ನಿರ್ಣಯಗಳು ಉತ್ತಮವಾಗಿರಬೇಕಾದರೆ ಈ ರೀತಿಯ ತರಬೇತಿ ಕಾರ್ಯಕ್ರಮಗಳು ಅಗತ್ಯ. ಸಂಯುಕ್ತ ಸಹಕಾರಿ ಈ ರೀತಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಇದೊಂದು ಶ್ಲಾಘನೀಯ ತರಬೇತಿಯಿಂದಲೇ ಉತ್ತಮ ಕಾರ್ಯಕರ್ತರ ಪಡೆಸಿದ್ದವಾಗುತ್ತಿದೆ. ನಂತರ ಆಡಳಿತ ಚುರುಕಾಗುತ್ತದೆ. ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಪ್ರಕಾಶರಾವ್ ರವರು ಮಾತನಾಡಿ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ ಇದೆ. ನಿಬಂಧಕರ ಸಹಕಾರ ಇಲಾಖೆಯ ಹತೋಟಿ ಕಡಿಮೆ ಪ್ರಮಾಣದಲ್ಲಿದೆ. ಹೀಗಾಗಿ ಆಡಳಿತ ಮಂಡಲಿ ಹಾಗೂ ಸಾಮಾನ್ಯ ಸಭೆಗೆ ಹೆಚ್ಚಿನ ಜವಾಬ್ದಾರಿಯಿದೆ. ಇಂತಹ ತರಬೇತಿ ಕಾರ್ಯಕ್ರಮಗಳು ನಿರ್ದೇಶಕ ಜವಾಬ್ದಾರಿ, ಕರ್ತವ್ಯ ಇವುಗಳ ಜ್ಞಾನವನ್ನು ಒದಗಿಸುತ್ತದೆ. ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯು ಈ ಬಗ್ಗೆ ಪೂರ್ಣ ಜವಾಬ್ದಾರಿ ತೆಗೆದುಕೊಂಡು ಕಾರ್ಯನಿರ್ವಹಿಸುತ್ತದೆ. ಅದು ಶ್ಲಾಘನೀಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಸೌಹಾರ್ದ ಸಹಕಾರಿಗಳ ಪ್ರಗತಿ, ಸಾಧನೆಗಳ ಬಗ್ಗೆ ವಿವರ ನೀಡಿದರು. ಶ್ರೀ ರಘುನಂದನ್ ಕೆ. ರವರು ಪ್ರಾಸ್ತಾವಿಕವಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಯಲ್ಲಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳ ಮಹತ್ವರ ಪಾತ್ರ ನಿರ್ವಹಿಸುವುದನ್ನು ಮನಗಂಡು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಉತ್ತಮ ವಿಷಯಗಳ ಆಯ್ಕೆಮಾಡಿ ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ಅವರಿಂದ ಉಪನ್ಯಾಸ ವ್ಯವಸ್ಥೆಮಾಡಿದೆ ಇದರ

ಸಂಪೂರ್ಣ ಪ್ರಯೋಜನವನ್ನು ನಿರ್ದೇಶಕರು ಪಡೆಯಲು ಅವಕಾಶ ಒದಗಿಸಲಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ಸವಿತಾ ರವರಿಂದ ಪ್ರಾರ್ಥನೆ, ಶ್ರೀ ರಘುನಂದನ ಯವರಿಂದ ಸ್ವಾಗತ ಕಾರ್ಯಕ್ರಮ ನಡೆಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರಿ ಬಿ.ಎಸ್ ಗುಂಡರಾವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಸಂಯುಕ್ತ ಸಹಕಾರಿಯ ಶ್ರೀ ಪ್ರಸನ್ನ ಕುಮಾರರವರು ವಂದನಾರ್ಪನೆ ಮಾಡಿದರು.

**ಸಮಾರೋಪ ಕಾರ್ಯಕ್ರಮ**



ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶ್ರೀ ಗುರುನಾಥ ಜಾಂತಿಕರ ರವರು ಸೌಹಾರ್ದ ಸಹಕಾರಿ ಚಳುವಳಿ ಇದುವರೆಗೆ ಸಾಧಿಸಿದ ಪ್ರಗತಿ, ಸಾಧನೆ ಸಂಯುಕ್ತ ಸಹಕಾರಿಯ ಬೆಳವಣಿಗೆಯಲ್ಲಿ ಈ ಕ್ಷೇತ್ರ ಜಾರಿಗೆ ಬರಲು ಮತ್ತು ಪ್ರಗತಿ ಸಾಧಿಸುವಲ್ಲಿ ಈ ಹಿಂದಿನ ಹಿರಿಯ ಸಹಕಾರಿಗಳ ಪಾತ್ರ ಅವರ ಕೊಡುಗೆ ಅವಿಸ್ಮರಣೀಯ, ಅವರನ್ನು ನಾವು ಮರೆಯಬಾರದು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮ ಎಂದು ತಿಳಿಸಿದರು.

ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರಿ ಜಗದೀಶ ಕವಟಗಿಮಠ ರವರು ಸೌಹಾರ್ದ ಸಹಕಾ–ರಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ, ವೃತ್ತಿಪರತೆಯನ್ನು ಹೆಚ್ಚಿನ ಕೊಳ್ಳುವುದಕ್ಕಾಗಿ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸೌಹಾರ್ದ ಸಹಕಾರಿಗಳು ತಮ್ಮ ವಿಶ್ವಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆಯಿದೆ. ಠೇವಣೀದಾರರಿಗೆ ಯಾವುದೇ ಕಾರಣ–ಕ್ಕೂ ಮೋಸವಾಗದಂತೆ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿಯ ಕಾರ್ಯನಿರ್ವಹಿಸಬೇಕು. ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್ ಗುಂಡೂರಾವ್ ರವರು ಉಪಸ್ಥಿತರಿದ್ದರು. ಶ್ರೀ ನಾರಾಯಣ ಹೆಗಡೆ, ಹಿರಿಯ ಉಪಪ್ರಧಾನ ವ್ಯವಸ್ಥಾಪಕ ಇವರು ವಂದನಾರ್ಪಣೆ ಸಲ್ಲಿಸಿದರು.

**ಮೂರನೇ ಕಾರ್ಯಕ್ರಮ ದಿನಾಂಕ 22 & 23, ಜೂನ್ 2022**



ದಿನಾಂಕ 22 & 23 ಜೂನ್ 2022 ರಂದು 3ನೇ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಸಹಕಾರಿ ಇಲಾಖೆಯ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನ್ ರವರು ಉದ್ಘಾಟಿಸಿ ಮಾತನಾಡುತ್ತ ಸಂಯುಕ್ತ ಸಹಕಾ–ರಿಯ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಶಿಸ್ತು, ಸಮಯ ಪಾಲನೆ ಸಂಯುಕ್ತ ಸಹಕಾರಿಯು ಇದರ ವೈಶಿಷ್ಟ, ಉತ್ತಮ ವಿಷಯಗಳನ್ನು ಅಳವಡಿಸಲಾಗುತ್ತದೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ಉಪನ್ಯಾಸ ಮಾಡಿಸಲಾಗುತ್ತದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಇದರ ಪ್ರಯೋಜನ ಪಡೆಯಲು ಕರೆ ನೀಡಿದರು. ಮತ್ತು ಕಾರ್ಯಕ್ರಮಕ್ಕೆ ಶುಭಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಹಾಗೂ ಸಾಧನೆಗಳ ಬಗ್ಗೆ ವಿವರ ನೀಡಿ ಸಂಯುಕ್ತ ಸಹಕಾರಿಯ ತಮ್ಮ ಅವಧಿಯ ಸಾಧನೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್ ಗುಂಡುರಾವ್ ರವರು ಉಪಸ್ಥಿತರಿದ್ದು ತಮ್ಮ ಅನುಭವವನ್ನು ಹಂಚಿಕೊಂಡರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ಇವರು ಕಾರ್ಯಕ್ರಮದ ಉದ್ದೇಶಗಳನ್ನು ವಿವರಿಸಿದರು.

ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ಅಧಿಕಾರಿ ಶ್ರೀ ಸಂಜಯ ಕೊರಟಕರರವರು ವಂದನಾರ್ಪಣೆ ಸಲ್ಲಿಸಿದರು. ಪ್ರಾರಂಭದಲ್ಲಿ ಶ್ರೀಮತಿ ವಿಜಯಾರವರಿಂದ ಪ್ರಾರ್ಥನೆ, ಉಪಪ್ರಧಾನ ವ್ಯವಸ್ಥಾಪಕ ಶ್ರೀ ಕೆ. ರಘುನಂದನ್ ರವರಿಂದ ಸ್ವಾಗತ ನೆರವೇರಿಸಲಾಯಿತು.

## ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ 2022

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 24.07.2022 ರಂದು ಸಂಯುಕ್ತ ಸಹಕಾರಿಯ ಮುಂಬರುವ ಐದು ವರ್ಷಗಳ ಅವಧಿಯ 21 ನಿರ್ದೇಶಕರುಗಳ ಸ್ಥಾನಕ್ಕೆ **ನಿರ್ಮಲಾ ರಾಣಿ ಪ್ರೌಢಶಾಲೆ, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055** ಚುನಾವಣೆ ನಡೆಯಲಿದೆ.

ಈ ಚುನಾವಣೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ 2808 ಅರ್ಹ ಮತದಾರರು ಭಾಗವಹಿಸಲಿದ್ದಾರೆ. 2765 ಅನರ್ಹ ಮತದಾರರಾಗಿ ಉಳಿದಿರುತ್ತಾರೆ. ಈ ಚುನಾವಣೆಯ ಚುನಾವಣಾಧಿಕಾರಿಯಾಗಿ ಶ್ರೀ ನವೀನ್ ರಾಜ್ ಸಿಂಗ್, ಐ.ಎ.ಎಸ್, ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮತ್ತು ಹಿರಿಯ ಕೆ.ಎ.ಎಸ್ ಅಧಿಕಾರಿಯಾದ ಶ್ರೀ ಬಿ. ವೆಂಕಟೇಶ್ ಇವರು ರಿಟರ್ನಿಂಗ್ ಅಫೀಸರ್ ಆಗಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಮಂಜುನಾಥ ಸಿಂಗ್ ಇವರು ಅಸ್ಟಿಟೆಂಟ್ ರಿಟರ್ನಿಂಗ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಚುನಾವಣಾಧಿಕಾರಿಗಳು ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.Souharda.coop ನಲ್ಲಿ ಪ್ರಕಟಿಸಲಾಗಿದೆ.

ರಿಟರ್ನಿಂಗ್ ಅಧಿಕಾರಿಗಳು ಹೊರಡಿಸುವ ಚುನಾವಣಾ ವೇಳಾಪಟ್ಟಿಯನ್ನು ಕೂಡ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಹಾಗೂ ಎಲ್ಲಾ ಅರ್ಹ ಮತದಾರರಿಗೆ ವೇಳಾಪಟ್ಟಿಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

**ಬೆಂಗಳೂರು :** ದಿನಾಂಕ 24.06.2022 ಶುಕ್ರವಾರದಂದು ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು "ಸೌಹಾರ್ದ ಸಹಕಾರಿ ಸೌಧ", ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇರಿಸಿದರು. ಸ್ವಾಗತ ಭಾಷಣವನ್ನು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಮ್. ಹಾಗೂ ಶ್ರೀ ರಾಜೇಶ್ ಕೆ.ಎಮ್ ಇವರು ನಡೆಸಿಕೊಟ್ಟರು. ತರಬೇತಿಯಲ್ಲಿ ಒಟ್ಟು 97 ಸೌಹಾರ್ದ ಸಹಕಾರಿಗಳಿಂದ 108 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

**ಧಾರವಾಡ–ಗದಗ–ಹಾವೇರಿ :** ದಿನಾಂಕ 10 ಜೂನ್ 2022ರ ಶುಕ್ರವಾರದಂದು ದಿ.ಮುಳಗುಂದ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಶಾಖೆ: ಗದಗ ಇಲ್ಲಿ ಗದಗ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳಿಗಾಗಿ ವಿಷಯಾಧಾರಿತ ತರಬೇತಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡಿ, ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು, ಉದ್ಘಾಟನೆಯನ್ನು ಶ್ರೀ ನಾಗರಾಜ ಆರ್ ದೇಶಪಾಂಡೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ್ ಹೊರಕೇರಿ ಮಾನ್ಯ ಅಧ್ಯಕ್ಷರು, ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಇವರು, ಅತಿಥಿ ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಾಜಶೇಖರ ಎನ್ ಗಡ್ಡಿ, ಮಾನ್ಯ ಹಿರಿಯ ನಿರೀಕ್ಷಕರು ಸಹಕಾರ ಸಂಘಗಳ ಇಲಾಖೆ ಗದಗ ರವರು ಸಭೆಯಲ್ಲಿ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಾಜಶೇಖರ ಎನ್ ಗಡ್ಡಿ, ಇವರು ಆಡಳಿತ ಮಂಡಳಿ ಚುನಾವಣಾ ಪೂರ್ವ ಸಿದ್ಧತೆ ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮಕದಲ್ಲಿ ಗದಗ ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್ ಟಿ ಇವರುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಗದಗ ಜಿಲ್ಲೆಯ 58 ಪ್ರತಿನಿಧಿಗಳು ಉಪಸ್ಥಿತರಿದ್ದರು.

**ವಿಜಯಪುರ :** ದಿನಾಂಕ 11.06.2022 ರಂದು ಶ್ರೀ ಗುರುದತ್ತ ಮಂಗಲ ಕಾರ್ಯಾಲಯ ಸ್ಟೇಷನ ರಸ್ತೆ ವಿಜಯಪುರ ಇಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಎಚ್ ಕೃಷ್ಣಾರೆಡ್ಡಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ ಉಪ್ಪಿನ್ ಇವರು ವಹಿಸಿದರು. ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಶ್ರೀ ಎಸ್ ಜಿ ಕುಂಬಾರ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ವಿಜಯಪುರ ಇವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುನಿಲ್ ಪತ್ತಾರ, ಮಾನ್ಯ, ಸಹಾಯಕ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಮೂಧೋಳ ಇವರು ಆರ್ಥಿಕ ತಃಖ್ತೆಗಳ ಅಂತಿಮಗೋಳಿಸುವಿಕೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಶ್ರೀ ಶಿವಕಾಂತ ಎನ್, ವಿಜಯಪುರ ಜಿಲ್ಲಾ ಸಂಯೋಜ–ಕರು ಇವರು ಸಹಕಾರಿಗಳ ಚುನಾವಣಾ ಪೂರ್ವ ಸಿದ್ದತೆ ಮತ್ತು ಮತದಾರರ ಯಾದಿ ತಯಾರಿ ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮಕದಲ್ಲಿ ವಿಜಯಪುರ ಜಿಲ್ಲಾ ಸಂಯೋಜಕರುಗಳಾದ ಶ್ರೀ ಶಿವಕಾಂತ ಎನ್ ಮತ್ತು ಶ್ರೀ ಪ್ರಭಯ್ಯಾ ಹಿರೇಮಠ ಇವರುಗಳು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 171 ಸೌಹಾರ್ದ ಸಹಕಾರಿಗಳಿಂದ 207 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.



**ಮೈಸೂರು ಮತ್ತು ಕೊಡಗು ಜಿಲ್ಲೆ :** ಮೈಸೂರು ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 17.06.2022 ಶುಕ್ರವಾರ ಬೆಳಿಗ್ಗೆ 10:30 ಗಂಟೆಗೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಜಿ.ಆರ್. ವಿಜಯಕುಮಾರ್‌ರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಎಂ. ರವಿ ರವರು, ಶ್ರೀ ಕನ್ಯಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕ್‌ನ ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಶ್ರೀನಿವಾಸ್‌ಮೂರ್ತಿ ಸಿ.ಪಿ. ರವರು, ಕಾರ್ಪೊರೇಟ್ ಟ್ರೈನರ್‌ರಾದ ಶ್ರೀ ರಮೇಶ್‌ಕುಮಾರ್‌ರವರು ಭಾಗವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು. ನಂತರ ಕಾರ್ಪೊರೇಟ್ ಟ್ರೈನರ್‌ರಾದ ಶ್ರೀ ರಮೇಶ್‌ಕುಮಾರ್‌ರವರು ಸಿಬ್ಬಂದಿಗಳ ವೃತ್ತಿಪರತೆ ಹಾಗೂ ಸದಸ್ಯರ ಸಂಬಂಧಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು ಹಾಗೂ ಶ್ರೀ ಕೆ. ಕೇಶವ ಡೋಂಗ್ರೆ, ಸನ್ನದು ಲೆಕ್ಕಪರಿಶೋಧಕರು ಇವರು ಲೆಕ್ಕಪತ್ರಗಳ ನಿರ್ವಹಣೆ ಮತ್ತು ಸಿದ್ಧತೆ ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 45 ಸೌಹಾರ್ದ ಸಹಕಾರಿಗಳಿಂದ 51 ಪ್ರತಿನಿಧಿಗಳು ಭಾಗವಹಿಸಿದ್ದರು.



**ಮಂಡ್ಯ :** ದಿನಾಂಕ 24.06.2022 ರಂದು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಿಇಓ ಗಳಿಗೆ ಆಯೋಜಿಸಿದ್ದ "ಲೆಕ್ಕಪರಿಶೋಧನೆ ವರದಿ ಸಿದ್ಧತೆ ಹಾಗೂ ದಾಖಲೆಗಳ ಸಂಗ್ರಹ ಮತ್ತು ದಾವಾ ಪಂಚಾಯತಿ ನ್ಯಾಯಾಲಯ/ದಾವಾ ಸಲ್ಲಿಕೆ & ಪ್ರಕ್ರಿಯೆಗಳು " ವಿಷಯದ ತರಬೇತಿಯನ್ನು ಶ್ರೀ ವಿಕ್ರಮ್ ರಾಜೇ ಅರಸ್, ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಇವರು ಉದ್ಘಾಟನೆ ಮಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಗದೀಶ್ ಹೆಬ್ಬಾರ್, ಮೈಸೂರು ಇವರು ನಡೆಸಿಕೊಟ್ಟರು. ವೇದಿಕೆಯ ಮೇಲೆ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಇವರು ಉಪಸ್ಥಿತರಿದ್ದರು. ಸದರಿ ತರಬೇತಿಯ ನಿರೂಪಣೆಯನ್ನು ಶ್ರೀ ಬಬ್ರುವಾಹನ, ಸಿಇಓ, ಜೆ.ಆರ್.ಡಿ.ಎಸ್ ಗ್ರಾಮೀಣ ಮಹಿಳಾ ಸೌಹಾರ್ದ ಸಹಕಾರಿ ನಿ., ಮಳವಳ್ಳಿ ಇವರು, ಪ್ರಾರ್ಥನೆ ಶ್ರೀಮತಿ ಸುಶೀಲಾ, ಸಿಇಓ, ಶ್ರೀ ಮಹದೇಶ್ವರ ಸೌಹಾರ್ದ ಸಹಕಾರಿ ನಿ., ಹಲಗೂರು ಇವರು, ಸ್ವಾಗತ & ಪರಿಚಯ ಶ್ರೀ ಬೆಳ್ಳಪ್ಪ, ಸಿಇಓ, ಶ್ರೀ ಕ್ರಾಂತಿ ಯೋಗಿ ಬಸವೇಶ್ವರ ನೌಕರರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರು, ವಂದನಾರ್ಪಣೆ ಶ್ರೀ ನಾಗರಾಜು, ಸಿಇಓ, ಮಂಡ್ಯ ವರ್ತಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ 17 ಸಹಕಾರಿ ಗಳಿಂದ 31 ಪ್ರತಿನಿಧಿಗಳು ಸೇರಿ ಒಟ್ಟು 36 ಜನರು ಹಾಜರಿದ್ದರು. ತರಬೇತಿಯನ್ನು ಮಂಡ್ಯ ತಾಲ್ಲೂಕು ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇಲ್ಲಿ ಆಯೋಜಿಸಲಾಗಿತ್ತು.



**ದಕ್ಷಿಣ ಕನ್ನಡ :** ದಿನಾಂಕ 28.06.2022 ರ ಮಂಗಳವಾರ, ದಕ್ಷಿಣ–ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯ ಕಾರ್ಯನಿರ್ವಾಹಕರು/ಸಿಬ್ಬಂದಿಗಳಿಗೆ" ವಿಷಯಾಧಾರಿತ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದ ಉದ್ಘಾಟನೆಯನ್ನು ದಕ್ಷಿಣಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಉಪ–ನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ರವರು ನೆರವೇರಿಸಿದರು. ಅತಿಥಿಗಳಾಗಿ ಸಹಕಾರಿ ಸಂಘಗಳ ಲೆಕ್ಕಪರಿಶೋದನಾ ನಿರ್ದೇಶಕರಾದ ಶ್ರೀ ಬಾಲಸುಬ್ರಹ್ಮಣ್ಯ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ವ್ಯವಸ್ಥಾಪಕರು. ಉಪಸ್ಥಿತರಿದ್ದರು. ಲೆಕ್ಕಪರಿಶೋದನಾ ವರದಿಗಳ ಪೂರ್ವ ಸಿದ್ದತೆ " ವಿಷಯದ ಕುರಿತು ಉಪನ್ಯಾಸಕರಾಗಿ ಶ್ರೀ ಬಾಲಸುಬ್ರಹ್ಮಣ್ಯ, ಸೌಹಾರ್ದ ಸಹಕಾರಿಗಳ ಆದಾಯ ಹೆಚ್ಚಿಸುವಲ್ಲಿ ತಂತ್ರಜ್ಞಾನದ ಪಾತ್ರ ಹಾಗೂ ವ್ಯಕ್ತಿತ್ವ ವಿಕಸನ ವಿಷಯದ ಕುರಿತು ಶ್ರೀ ಜಗದೀಶ್ ರಾಮ್ ಇವರು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 83 ಸೌಹಾರ್ದ ಸಹಕಾರಿಗಳಿಂದ 88 ಪ್ರತಿನಿಧಿಗಳು ಹಾಜರಿದ್ದರು.



**ಉಡುಪಿ :** ದಿನಾಂಕ 29.06.2022ರ ಬುಧವಾರ, ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯ ಕಾರ್ಯನಿರ್ವಾಹಕರು/ಸಿಬ್ಬಂದಿಗಳಿಗೆ" ವಿಷಯಾಧಾರಿತ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದ ಉದ್ಘಾಟನೆಯನ್ನು ಉಡುಪಿ ಜಿಲ್ಲೆಯ ಸಹಕಾರ ಸಂಘಗಳ ಉಪ–ನಿಬಂಧಕರಾದ ಶ್ರೀ ಲಕ್ಷ್ಮೀನಾರಾಯಣ ರವರು ನೆರವೇರಿಸಿದರು. ಅತಿಥಿಗಳಾಗಿ ಸಹಕಾರಿ ಸಂಘಗಳ ಲೆಕ್ಕಪರಿಶೋದನಾ ಉಪ–ನಿರ್ದೇಶಕರಾದ ಶ್ರೀ ಗಣೇಶ್ ಮಯ್ಯ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ವ್ಯವಸ್ಥಾಪಕರು. ಉಪಸ್ಥಿತರಿದ್ದರು. ಲೆಕ್ಕಪರಿಶೋದನಾ ವರದಿಗಳ ಪೂರ್ವ ಸಿದ್ದತೆ "ವಿಷಯದ ಕುರಿತು ಉಪನ್ಯಾಸಕರಾಗಿ ಶ್ರೀ ಗಣೇಶ್ ಮಯ್ಯ, "ಸೌಹಾರ್ದ ಸಹಕಾರಿಗಳ ಆದಾಯ ಹೆಚ್ಚಿಸುವಲ್ಲಿ ತಂತ್ರಜ್ಞಾನದ ಪಾತ್ರ ಹಾಗೂ ವ್ಯಕ್ತಿತ್ವ ವಿಕಸನ ವಿಷಯದ ಕುರಿತು ಶ್ರೀ ಜಗದೀಶ್ ರಾಮ್.ಇವರು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 98 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಹಾಜರಿದ್ದರು.

**ಕೊಪ್ಪಳ :** ದಿನಾಂಕ 13.06.2022, ಸೋಮವಾರ, ಬೆಳಗ್ಗೆ 10:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮವನ್ನು ಕೊಪ್ಪಳ ನಗರದ ಶ್ರೀ ವೀರಮಹೇಶ್ವರ ಕ್ಷೇಮಾಭಿವೃದ್ಧಿ ಸಂಘ (ರಿ)., ಮರಿಸ್ವಾಮಿ ಬಡಾವಣೆ,ಶ್ರೀ ಮಾತಾ ಹೋಟಲ್ ಹತ್ತಿರ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದರು.ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್.ಹೆಚ್, ಸಹಕಾರ ಸಂಘಗಳ ಪ್ರಭಾರಿ ಮಾನ್ಯ ಉಪನಿಬಂಧಕರಾದ ಶ್ರೀ ಶರಣಬಸಪ್ಪ, ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಸಂಯುಕ್ತ ಸಹಕಾರಿಯ ಬೆಳಗಾವಿ ಮತ್ತು ಕಲಬುರಗಿ ಟಾಸ್ಕ್ ಫೋರ್ಸ ಮಾನ್ಯ ಉಸ್ತುವಾರಿ ಅಧಿಕಾರಿಗಳಾದ ಶ್ರೀ ಶ್ರೀಕಾಂತ ಬರುವೆ, ಒಕ್ಕೂಟದ ಮಾನ್ಯ ನಿರ್ದೇಶಕರುಗಳಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಶ್ರೀ ಯಲ್ಲಪ್ಪ ಬಸರಿಹಾಳ, ಶ್ರೀ ಗುರುರಾಜ್ ಬಿಸರಳ್ಳಿ ರವರು ಉಪಸ್ಥಿತರಿದ್ದರು.

ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀಕಾಂತ್ ಬರುವೆ ರವರು" ಆಡಳಿತ ಮಂಡಳಿ ಮತ್ತು ಸಾಮಾನ್ಯ ಸಭೆಗಳು ನಡೆಸುವ ವಿಧಾನಗಳು ಮತ್ತು ಸಭೆಗಳಲ್ಲಿ ಕಡ್ಡಾಯವಾಗಿ ಮಂಡಿಸಬೇಕಾದ ವಿಷಯಗಳು" ಕುರಿತು ಉಪನ್ಯಾಸವನ್ನು ನೆರವೇ–ರಿಸಿದರು. ಮಧ್ಯಾಹ್ನದ ಅವಧಿಯಲ್ಲಿ "ಜೀವನ ಕೌಶಲ್ಯಗಳು" ಎಂಬ ವಿಷಯದ ಕುರಿತು ಕಾರ್ಪೋರೇಟ್ ಟ್ರೈನರ್ಆದ ಶ್ರೀ ಡಾ॥ ಹರೀಶ್ ರವರು ಉಪನ್ಯಾಸವನ್ನು ನೆರವೇರಿಸಿದರು.ಕಾರ್ಯಕ್ರಮದಲ್ಲಿ ಒಟ್ಟು 170 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.

# ಸೌಹಾರ್ದ ಸಹಕಾರಿಗಳು ಸಂಗ್ರಹಿಸುವ ಠೇವಣಿಗಳು ಹಾಗೂ ನೀಡುವ ಸಾಲಗಳ ಬಡ್ಡಿದರ ನಿಗದಿಪಡಿಸುವ ಕುರಿತು.

**ಆತ್ಮೀಯ ಸಹಕಾರಿ ಬಂಧುಗಳೇ,**

ಕೆಲವೊಂದು ಸೌಹಾರ್ದ ಸಹಕಾರಿಗಳು ದ್ರವ್ಯಾಸ್ತಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗುತ್ತಿದ್ದು, ಇದರಿಂದಾಗಿ ಸೌಹಾರ್ದ ಸಹಕಾರಿಗಳ ಠೇವಣಿದಾರರಿಗೆ ತೊಂದರೆಯಾಗುತ್ತಿದೆ. ಹೆಚ್ಚಿನ ಠೇವಣಿಗಳನ್ನು ಸಂಗ್ರಹಿಸುವ ಉದ್ದೇಶದಿಂದ ಠೇವಣಿಗಳ ಮೇಲೆ ಅಧಿಕ ಬಡ್ಡಿ ದರಗಳನ್ನು ನಿಗದಿಪಡಿಸಿ, ಠೇವಣಿಗಳನ್ನು ಸಂಗ್ರಹಿಸುತ್ತಿದ್ದು, ಅಂತಹ ಠೇವಣಿಗಳನ್ನು ಸಮರ್ಪಕವಾಗಿ ಹೂಡಿಕೆ ಮಾಡುತ್ತಿರುವುದಿಲ್ಲ. ಹಾಗೆಯೇ, ಠೇವಣಿದಾರರು ಠೇವಣಿಗಳನ್ನು ಹಿಂಪಡೆಯಲು ಸೌಹಾರ್ದ ಸಹಕಾರಿಗಳಿಗೆ ತೆರಳಿದ ಸಂದರ್ಭದಲ್ಲಿ ಸಕಾಲದಲ್ಲಿ/ ಅವಧಿ ಮೀರಿಯೂ ಸಹ ಠೇವಣಿ ಮೊತ್ತವನ್ನು ಠೇವಣಿದಾರರಿಗೆ ಹಿಂತಿರುಗಿಸುತ್ತಿರುವುದಿಲ್ಲ. ಅಲ್ಲದೇ, ಸೌಹಾರ್ದ ಸಹಕಾರಿಗಳಿಂದ ಸಾಲ ವಿತರಿಸುವ ಸಂದರ್ಭದಲ್ಲಿಯೂ ಸಹ ನಿಗದಿಪಡಿಸುತ್ತಿರುವ ಬಡ್ಡಿ ದರಗಳಲ್ಲಿ ವ್ಯತ್ಯಾಸವಿರುತ್ತದೆ.

ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿ ದರಗಳನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ದಿನಾಂಕ 21 ಫೆಬ್ರವರಿ 2022ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, "ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿ ದರಗಳನ್ನು ನಿಗದಿಪಡಿಸುವ ಕುರಿತು ಹಾಗೂ ಸಹಕಾರಿಗಳು ನಿರ್ವಹಿಸುವ ಲೆಕ್ಕಪತ್ರ ವಿಧಾನ ಕುರಿತು ಸಮಿತಿ"ಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಅಧ್ಯಯನ ನಡೆಸಿ, ದಿನಾಂಕ 14 ಮಾರ್ಚ್ 2022ರಂದು ಸಮಿತಿ ಸಭೆ ನಡೆಸಿ, ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ವೈಜ್ಞಾನಿಕವಾಗಿ ಬಡ್ಡಿದರಗಳನ್ನು ನಿಗದಿಪಡಿಸಿರುತ್ತದೆ. ಈ ವರದಿಯನ್ನು ದಿನಾಂಕ 19 ಏಪ್ರಿಲ್ 2022ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಗೆ ಮಂಡಿಸಲಾಗಿರುತ್ತದೆ.

ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿದಂತೆ ಸೌಹಾರ್ದ ಸಹಕಾರಿಗಳು ಸಂಗ್ರಹಿಸುವ ಠೇವಣಿಗಳಿಗೆ ಹಾಗೂ ನೀಡುವ ಸಾಲಗಳಿಗೆ ನಿಗದಿಪಡಿಸಬಹುದಾದ ಬಡ್ಡಿದರ ಬಗ್ಗೆ ಸಲಹೆ ಹಾಗೂ ಆಕ್ಷೇಪಣೆಗಳನ್ನು ಪಡೆಯಲು ತೀರ್ಮಾನಿಸಲಾಗಿದೆ. ಸಹಕಾರಿಗಳು ನೀಡುವ ಸಲಹೆ ಹಾಗೂ ಆಕ್ಷೇಪಣೆಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕಾರ್ಯರೂಪಕ್ಕೆ ತರಲು ತೀರ್ಮಾನಿಸಲಾಗಿದೆ. ಸಹಕಾರಿಗಳು ತಮ್ಮ ಸಲಹೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 15.08.2022 ಕೊನೆಯ ದಿನವಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ಸಲಹೆ ಮತ್ತು ಆಕ್ಷೇಪಣೆಗಳನ್ನು kssfcladmin@souharda.coop ಮೇಲ್ ಐಡಿಗೆ ಕಳುಹಿಸಲು ಕೋರಿದೆ.

**ಶರಣಗೌಡ ಜಿ. ಪಾಟೀಲ**
**ವ್ಯವಸ್ಥಾಪಕ ನಿರ್ದೇಶಕ**

**ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ವೈಜ್ಞಾನಿಕವಾಗಿ ನಿಗದಿಪಡಿಸಲಾಗಿರುವ ಕರಡು ಬಡ್ಡಿ ದರಗಳ ವಿವರಗಳು ಈ ಕೆಳಗಿನಂತಿದೆ.**

1. ಯಾವುದೇ ಸಹಕಾರಿಯು ಸದಸ್ಯೇತರರಿಂದ ನಾಮಮಾತ್ರ ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸತಕ್ಕದ್ದಲ್ಲ.
2. ಯಾವುದೇ ಸಹಕಾರಿಯು ಠೇವಣಿಯನ್ನು ಪತ್ತೇತರ ಉದ್ಧೇಶಕ್ಕಾಗಿ ವಿನಿಯೋಗಿಸತಕ್ಕದಲ್ಲ.
3. ಸೌಹಾರ್ದ ಸಹಕಾರ ಸಂಘಗಳು ಸದಸ್ಯರ ಉಳಿತಾಯ ಖಾತೆಗೆ ನಿಗದಿಪಡಿಸುವ ಬಡ್ಡಿದರಗಳು ಶೇ.4ಕ್ಕಿಂತ ಮೀರತಕ್ಕದ್ದಲ್ಲ.
4. ಅವಧಿ ಠೇವಣಿಗಳಿಗೆ ಮತ್ತು ಮರುಕಳಿಸುವ ಠೇವಣಿ (RD) ಗಳಿಗೆ ಎಸ್.ಬಿ.ಐ/ವಾಣಿಜ್ಯ ಬ್ಯಾಂಕ್‌ಗಳು ಕಾಲಕಾಲಕ್ಕೆ ನಿಗದಿಪಡಿಸುವ ಬಡ್ಡಿ ದರಕ್ಕಿಂತ ಶೇ.4ರಷ್ಟು ಮೀರತಕ್ಕದ್ದಲ್ಲ.
5. ನಿರ್ದಿಷ್ಠ ಅವಧಿಯ ಯೋಜನೆಗಳನ್ನು ಹೊರತುಪಡಿಸಿ, (ದುಪ್ಪಟ್ಟು ಯೋಜನೆ) ಯಾವುದೇ ಸಹಕಾರಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.
6. ಸಹಕಾರಿ ಸಂಸ್ಥೆಗಳು ಸ್ಥಾನಿಕ ಹಣಕಾಸು ಸಂಸ್ಥೆಗಳಾಗಿದ್ದು, ಸಂಸ್ಥೆಗಳಲ್ಲಿಯ ಆಡಳಿತ, ವ್ಯವಹಾರ ಪದ್ಧತಿಯನ್ನು ಆಧರಿಸಿ ಸಾರ್ವಜನಿಕರು ಸದಸ್ಯರಾಗಿ ಠೇವುಗಳನ್ನು ಜಮೆ ಮಾಡುವರು. ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಸಹಕಾರಿಗಳು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮುಖಾಂತರ ಕಮೀಷನ್/ ಇನ್ಸೆಂಟಿವ್ ಕೊಡುವುದರ ಮೂಲಕ ಠೇವುಗಳನ್ನು ಸ್ವೀಕರಿಸತಕ್ಕದ್ದಲ್ಲ ಹಾಗೂ ಜಾಹೀರಾತು ಮೂಲಕ ಠೇವು ಸಂಗ್ರಹಣೆ ಮಾಡತಕ್ಕದ್ದಲ್ಲ.
7. ಸಹಕಾರಿಗಳು ಪಿಗ್ಮಿ ಠೇವುಗಳನ್ನು ಸ್ವೀಕರಿಸಿದಲ್ಲಿ ಅವುಗಳ ಮೇಲೆ ಕೊಡುವ ಕಮೀಷನ್ ದರವು 3% ಮೀರಬಾರದು. ಅಂತಹ ಠೇವುಗಳ ಮೇಲೆ ಗರಿಷ್ಠ ಅವಧಿಗೆ (3 ವರ್ಷ ಹಾಗೂ ಮೇಲ್ಪಟ್ಟು) ಕೊಡುವ ಬಡ್ಡಿದರ ಗರಿಷ್ಠ 4% ಮೀರಬಾರದು.
8. ಒಂದು ಸಹಕಾರ ಸಂಘವು ದಿನವಹಿ ನಿರ್ವಹಿಸುವ ನಗದು ಬಾಕಿ (Cash Balance) ನ್ನು ಸಂಘದ ಠೇವಣಿಗಳ ಶೇ.2ಕ್ಕಿಂತ ಮೀರತಕ್ಕದ್ದಲ್ಲ. ಇದರಲ್ಲಿ ದ್ರವ್ಯಾಸ್ತಿಯು ವಾಣಿಜ್ಯ ಬ್ಯಾಂಕಿನಲ್ಲಿ ಚಾಲ್ತಿ ಖಾತೆಯಲ್ಲಿ ವಿನಿಯೋಗಿಸುವ ಮೊತ್ತವನ್ನೂ ಒಳಗೊಂಡಿರುತ್ತದೆ.
9. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಠೇವಣಿ ಮರುಪಾವತಿ ಕೋರಿದಲ್ಲಿ, ಆ ಅವಧಿಯ ಠೇವಣಿಗೆ ಕೊಡುತ್ತಿದ್ದ ಬಡ್ಡಿದರದಲ್ಲಿ ಗರಿಷ್ಠ 2% ಕಡಿತಗೊಳಿಸಬಹುದು.
10. ಸೌಹಾರ್ದ ಸಹಕಾರಿಗಳು ವಿತರಿಸುವ ಭದ್ರತಾ ಸಾಲಗಳಿಗೆ ಗರಿಷ್ಠ ಶೇ.16 ಹಾಗೂ ಭದ್ರತಾ ರಹಿತ ಸಾಲಗಳಿಗೆ ಗರಿಷ್ಠ ಶೇ.18ರಷ್ಟು ಬಡ್ಡಿ ದರವನ್ನು ನೀಡತಕ್ಕದಲ್ಲ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಚುನಾವಣಾ ವೇಳಾಪಟ್ಟಿಯ ನೋಟೀಸು.

ನಮೂನೆ –2ಎ
(ನಿಯಮ 5ಇ(3) ಅನ್ನು ನೋಡಿ)

## ಚುನಾವಣಾ ನೋಟೀಸು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು – 560055 ಇಲ್ಲಿ ದಿನಾಂಕ 24.07.2022 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ. ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದೂ ನೋಟೀಸು ನೀಡಲಾಗಿದೆ.

| | | |
|---|---|---|
| – | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಪ್ರಾರಂಭಿಸುವ ದಿನಾಂಕ | ದಿನಾಂಕ: 09.07.2022<br>ಸಮಯ: ಬೆಳಿಗ್ಗೆ 10.00 ಗಂಟೆಯಿಂದ |
| (ಎ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 5ಇ) | ದಿನಾಂಕ: 16.07.2022<br>ಸಮಯ: ಸಂಜೆ 4.00 ಗಂಟೆಯವರೆಗೆ |
| (ಬಿ) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 5ಜಿ) | ದಿನಾಂಕ: 17.07.2022<br>ಸಮಯ: ಬೆಳಿಗ್ಗೆ 11.00 ಗಂಟೆಗೆ |
| (ಸಿ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ: 17.07.2022 ರಂದು<br>ನಾಮಪತ್ರಗಳ ಪರಿಶೀಲನೆ ನಂತರ |
| (ಡಿ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆತಕ್ಕೆ ಕೊನೆಯ ದಿನ. (ನಿಯಮ 5ಹೆಚ್) | ದಿನಾಂಕ: 18.07.2022<br>ಸಮಯ: ಸಂಜೆ 3.00 ಗಂಟೆಯವರೆಗೆ |
| (ಇ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ: 18.07.2022<br>ಸಮಯ: ಸಂಜೆ 4.00 ಗಂಟೆಗೆ |
| (ಎಫ್) | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ (ನಿಯಮ 5ಜೆ) | ದಿನಾಂಕ: 18.07.2022<br>ಸಮಯ: ಸಂಜೆ 4.30 ಗಂಟೆಗೆ |
| (ಜಿ) | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 5ಜೆ) | ದಿನಾಂಕ: 20.07.2022<br>ಸಮಯ: ಬೆಳಿಗ್ಗೆ 11.00 ಗಂಟೆಗೆ |
| (ಹೆಚ್) | ಮತದಾನದ ಸ್ಥಳ, ದಿನಾಂಕ ಮತ್ತು ಸಮಯ | ಸ್ಥಳ : ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು–560055<br>**ದಿನಾಂಕ:** 24.07.2022, ಭಾನುವಾರ<br>**ಸಮಯ:** ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ |

1 | Page

| | | |
|---|---|---|
| (ಐ) | ಮತ ಎಣಿಕೆಯ ಸ್ಥಳ, ದಿನಾಂಕ ಮತ್ತು ಸಮಯ | **ಮತ ಎಣಿಕೆಯ ಸ್ಥಳ :** ನಿರ್ಮಲಾ ರಾಣಿ ಹೈ ಸ್ಕೂಲ್, 18ನೇ ಅಡ್ಡರಸ್ತೆ, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು – 560 055 <br> **ಮತ ಎಣಿಕೆಯ ದಿನಾಂಕ ಮತ್ತು ಸಮಯ :** ಮತದಾನದ ದಿನದಂದು ಅಂದರೆ ದಿನಾಂಕ: 24.07.2022 ಮತದಾನದ ಅವಧಿ ಮುಕ್ತಾಯವಾದ ತಕ್ಷಣ. |
| (ಜೆ) | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ಮತದಾನದ ದಿನದಂದು ಮತ ಎಣಿಕೆ ಮುಕ್ತಾಯವಾದ ತಕ್ಷಣ |

(a) ಚುನಾಣೆಯಲ್ಲಿ ಭರ್ತಿ ಮಾಡಬೇಕಾಗಿರುವ ಸ್ಥಾನಗಳ ಸಂಖ್ಯೆ: 21
[ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕಲಂ.54(2) ರಂತೆ]

(b) ನಿರ್ದೇಶಕರನ್ನು ಚುನಾಯಿಸಬೇಕಾದ ಮತಕ್ಷೇತ್ರ (ಉಪವಿಧಿ ಸಂಖ್ಯೆ 21ರಲ್ಲಿ ನಿರ್ದಿಷ್ಟಪಡಿಸಿದಂತೆ):


| ಮತಕ್ಷೇತ್ರದ ಹೆಸರು | ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ |
|---|---|
| ಬೆಂಗಳೂರು ಪ್ರಾಂತ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು) | 6 |
| ಮೈಸೂರು ಪ್ರಾಂತ (ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳು) | 2 |
| ಬೆಳಗಾವಿ ಪ್ರಾಂತ (ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳು) | 7 |
| ಕಲಬುರಗಿ ಪ್ರಾಂತ (ಕಲಬುರಗಿ, ಬೀದರ್, ಯಾದಗಿರಿ, ಬಳ್ಳಾರಿ, ವಿಜಯನಗರ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು) | 6 |

ಯಾವುದೇ ಜಿಲ್ಲೆಯಿಂದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಲು ಅವಕಾಶ ಇರುವುದಿಲ್ಲ. ಹಾಗೂ ಯಾವುದೇ ಪ್ರಾಂತದಿಂದ ಮೂರನೇ ಒಂದರಷ್ಟಕ್ಕಿಂತ ಹೆಚ್ಚಿನ ನಿರ್ದೇಶಕರು ಆಯ್ಕೆಯಾಗುವಂತಿಲ್ಲ. (ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 21(2))

(c) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳು:

**ನಿರ್ದೇಶಕರ ಅರ್ಹತೆಗಳು:**

1) ಕಾಯ್ದೆ ಕಲಂ 55 ರನ್ವಯ ಅನರ್ಹತೆ ಹೊಂದಿರದ ಸದಸ್ಯರು ನಿರ್ದೇಶಕರಾಗಲು ಅರ್ಹರು.



2) ಸಂಯುಕ್ತ ಸಹಕಾರಿಗೆ ಯಾವುದೇ ರೀತಿಯಿಂದ ಬಾಕಿ ಇರದ ಸದಸ್ಯ ಸಹಕಾರಿಯನ್ನು ಪ್ರತಿನಿಧಿಸುವ ಡೆಲಿಗೇಟನು ನಿರ್ದೇಶಕರಾಗುವ ಅರ್ಹತೆ ಪಡೆದಿರುತ್ತಾನೆ. (ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 25(2))

(d) ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಧಿನಿಯಮ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳು.

ಒಬ್ಬ ವ್ಯಕ್ತಿಯು,–

(i) ಯಾವುದೇ ಸಮಯದಲ್ಲಿ ಸದಸ್ಯನಾಗಿ ಮತದಾನ ಮಾಡುವ ಅಥವಾ ಸದಸ್ಯನಾಗಿ ಮುಂದುವರಿಯುವ ಹಕ್ಕು ಕಳೆದುಕೊಂಡಿದ್ದರೆ; ಅಥವಾ

(ii) ಚುನಾವಣೆಯ ನಿಕಟಪೂರ್ವದ ಕನಿಷ್ಠ ಎರಡು ವರ್ಷಗಳ ಅವಧಿಯವರೆಗೆ ಸಂಯುಕ್ತ ಸಹಕಾರಿಯ ಮತದಾರ ಸದಸ್ಯನಾಗಿರದಿದ್ದರೆ; ಅಥವಾ

(iii) ಸಂಯುಕ್ತ ಸಹಕಾರಿಯ ಉಪವಿಧಿಗಳಲ್ಲಿ (ಉಪವಿಧಿ ಸಂಖ್ಯೆ 26) ನಿರ್ದಿಷ್ಟಪಡಿಸಲಾದ ಯಾವುದೇ ಅನರ್ಹತೆಯನ್ನು ಹೊಂದಿದ್ದರೆ; ಅಥವಾ

(iv) ಮಂಡಲಿಯ ಅಥವಾ ಸಾಮಾನ್ಯ ಸಭೆಯ ಮೂರು ನಿರಂತರ ಸಭೆಗಳಿಗೆ ಅನಧಿಕೃತವಾಗಿ ಗೈರುಹಾಜರಾದರೆ; ಅಥವಾ

(v) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ. ಅಥವಾ

(vi) ನಿರ್ದೇಶಕನು ತಾನು ಪ್ರತಿನಿಧಿಸುವ ಸಹಕಾರಿಯ ಮಂಡಲಿಯ ಸದಸ್ಯತ್ವ ನಿಂತುಹೋದಲ್ಲಿ;

–ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರಿಯಲು ಅನರ್ಹನಾಗಿರುತ್ತಾನೆ.

(e) ಪ್ರತಿ ಸಹಕಾರಿಯ ಡೆಲಿಗೇಟನು ಆ ಪ್ರಾಂತದಿಂದ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯಷ್ಟು ಮತಗಳನ್ನು ಮಾತ್ರ ಹೊಂದಿರತಕ್ಕದ್ದು. ಪ್ರತಿ ಪ್ರಾಂತದಿಂದ ಚುನಾವಣೆಯಲ್ಲಿ ಅತಿ ಹೆಚ್ಚು ಮತವನ್ನು ಪಡೆದ ಉಮೇದುವಾರರಲ್ಲಿ ಕಂಡಿಕೆ ಬಿ ನಲ್ಲಿ ತಿಳಿಸಿದಂತೆ ಆ ಪ್ರಾಂತದಿಂದ ಆಯ್ಕೆಯಾಗಬೇಕಾದ ನಿರ್ದೇಶಕರ ಸಂಖ್ಯೆಯಷ್ಟು ಉಮೇದುವಾರರು ಚುನಾಯಿತರಾಗತಕ್ಕದ್ದು. ಯಾವುದೇ ಜಿಲ್ಲೆಯಿಂದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಲು ಅವಕಾಶ ಇರುವುದಿಲ್ಲ.

(f) ಚುನಾವಣೆಯಲ್ಲಿ ಸ್ಪರ್ಧಿಸಬಯಸುವವರು, ತಮ್ಮ ನಾಮಪತ್ರವನ್ನು ನಮೂನೆ 2ಬಿ ಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 03.00 ಗಂಟೆಯೊಳಗೆ ರಿಟರ್ನಿಂಗ್ ಅಧಿಕಾರಿಗೆ/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ತಾನು ಪ್ರತಿನಿಧಿಸುವ ಸಹಕಾರಿಯ ಆಡಳಿತ ಮಂಡಲಿ ನಿರ್ಣಯ ಹಾಗೂ ಚುನಾವಣಾ ಠೇವಣಿ ಸಲ್ಲಿಸಿದ ರಸೀದಿಯೊಂದಿಗೆ ಖುದ್ದಾಗಿ ಸಲ್ಲಿಸತಕ್ಕದ್ದು.

(g) ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 5ಎಫ್(3)(ii) ರಂತೆ ಚುನಾವಣಾ ಠೇವಣಿ ರೂ.5,000/–ಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (Karnataka State Souharda Federal

3 | Page

Cooperative Ltd.) ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಪ್ಟ್ ಮೂಲಕ ಅಥವಾ ನಗದಾಗಿ ಪಾವತಿಸಿ ರಶೀದಿ ಪಡೆಯತಕ್ಕದ್ದು. ಪರಂತು; ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ ಪಾವತಿಸಬೇಕಾದ ಚುನಾವಣಾ ಠೇವಣಿಯ ಶೇ.50ರಷ್ಟು ಅಂದರೆ ರೂ.2,500/- ಆಗಿರುತ್ತದೆ.

(h) ಮತ ಚಲಾಯಿಸಲು ಸಹಕಾರ ಚುನಾವಣಾ ಪ್ರಾಧಿಕಾರವು ವಿತರಿಸಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

(i) ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಂದೂ ಸಹ ಸಂಯುಕ್ತ ಸಹಕಾರಿಯ ಕಛೇರಿ ಬೆಳಿಗ್ಗೆ 10.00 ರಿಂದ ಸಂಜೆ 03.00 ರವರೆಗೆ ಕಾರ್ಯ್ಯನಿರ್ವಹಿಸುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 08.07.2022

([illegible] ವೆಂಕಟೇಶ್, ಕ.ಆ.ಸೇ)
ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ
ಹಾಗೂ ರಿಟರ್ನಿಂಗ್ ಅಧಿಕಾರಿ, ಕರಾಸೌಸಂಸನಿ, ಬೆಂಗಳೂರು

## ಸಮಾಲೋಚನಾ ಸಭೆ

**ಮಂಡ್ಯ :** ದಿನಾಂಕ 25.06.2022 ರಂದು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮಂಡ್ಯ ಜಿಲ್ಲಾ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿಯಲ್ಲಿ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶಂಕರ್ ಎಸ್, ಜಿಲ್ಲಾ ಸಂಯೋಜಕರು ಇವರು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ 12 ಸಹಕಾರಿಗಳಿಂದ 22 ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲಾ ಸಮಾಲೋಚನಾ ಸಭೆಯಲ್ಲಿ ಮಂಡ್ಯ ಜಿಲ್ಲಾ ಸಹಕಾರ ಭಾರತಿ ನಿರ್ದೇಶಕರಾದ ಶ್ರೀ ಗುರುರಾಜ್ ಮತ್ತು ಶ್ರೀ ಸಿದ್ದಲಿಂಗಯ್ಯ ಇವರು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರನ್ನು ಸನ್ಮಾನಿಸಿದರು.

## ಸಂಪರ್ಕ ಸಭೆ

**ಹಾವೇರಿ :** ದಿನಾಂಕ 28.06.2022 ರಂದು ಹಾವೇರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಹಾವೇರಿ ಜಿಲ್ಲೆಯ ಸಂತೃಪ್ತಿ ಹೊಟೇಲ್ ಹಾವೇರಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಂ ಬಿ ಕಲಾಲ್ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಹಾವೇರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಕಲ್ಮೇಶ್ ಎಸ್ ಎಂ, ಜಿಲ್ಲಾ ಸಂಯೋಜಕರು ಮತ್ತು ಟಾಸ್ಕ್ ಫೋರ್ಸ್ ವಿಭಾಗ ಇವರು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ 52 ಸಹಕಾರಿಗಳಿಂದ 73 ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

**ಚಿತ್ರದುರ್ಗ :** ದಿನಾಂಕ 21.06.2022 ರಂದು ನಿಸರ್ಗ ಸ್ವ-ಶಕ್ತಿ ಸೌಹಾರ್ದ ಸಹಕಾರಿ ನಿ, ಹೊಸದುರ್ಗ, ಈ ಸಹಕಾರಿಯ ಕಛೇರಿ ಆವರಣದಲ್ಲಿ ಹೊಸದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಇತ್ತೀಚೆಗೆ ತಿದ್ದುಪಡಿಯಾದ ಸೌಹಾರ್ದ ಕಾಯ್ದೆಯ ಅಂಶಗಳು, ಆಡಳಿತ ಮಂಡಳಿ ಮತ್ತು ವಾರ್ಷಿಕ ಸಾಮಾನ್ಯ ಸಭೆಯ ಬಗ್ಗೆ ಹಾಗೂ ಉಪವಿಧಿ ತಿದ್ದುಪಡಿಗಳ ಅಂಶಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಅಗತ್ಯ ಮಾಹಿತಿ ನೀಡಿದರು. ತರಬೇತಿಯಲ್ಲಿ 24 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸುರಭಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಇದರ 13ನೇ ಸರ್ವ ಸದಸ್ಯರ ಸಭೆ



**ಸಾಲ ಪಡೆದವರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದು ಅಗತ್ಯ - ಶಾಸಕ ಶ್ರೀ ರವಿಸುಬ್ರಮಣ್ಯ.**

ಸಹಕಾರಿಯ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಸಾಲ ತೆಗೆದುಕೊಂಡವರು ಅತ್ಯಂತ ಜವಾಭ್ದಾರಿಯುತವಾಗಿ ಮರುಪಾವತಿಸಬೇಕು ಹಾಗೂ ಸಾಲ ನೀಡುವಾಗ ಅಷ್ಟೆ ಜವಾಬ್ದಾರಿಯುತವಾಗಿ ಅಳೆದು ತೂಗಿ ಸಾಲ ನೀಡಬೇಕು. ಜನ ಸಹಕಾರ ಕ್ಷೇತ್ರದ ಮೇಲೆ ನಂಬಿಕೆ ಇಟ್ಟಿಕೊಂಡಿದ್ದು ಅದನ್ನು ಉಳಿಸಿಕೊಂಡು ಹೋಗಬೇಕು. ಈ ದಿಶೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಯಾವುದೇ ಫಲಾಪೇಕ್ಷೆ ಇಲ್ಲದೆ, ಅಚ್ಚುಕಟ್ಟಾದ ಯೋಜನೆ ಮತ್ತು ಯೋಚನೆಯನ್ನು ಮಾಡಿಕೊಂಡು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಸಹಕಾರಿಗಳನ್ನು ನೋಡಿಕೊಂಡು ಪ್ರವಾಸ ಮಾಡುತ್ತಾ ಬಂದಿದ್ದಾರೆ. ಸಹಕಾರ ಕ್ಷೇತ್ರವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಬೇಕೆಂಬ ಕನಸನ್ನು ಕಟ್ಟಿಕೊಂಡು ಸಾಕಾರಗೊಳಿಸುವಲ್ಲಿ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಹಾಗೂ ಅವರ ಟೀಮ್ ಉತ್ತಮವಾಗಿ ಕೆಲಸ ಮಾಡುತ್ತಾ ಬಂದಿದೆ, ಇದಕ್ಕೆ ಉದಾಹರಣೆ ಎಂದರೆ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ವಿಷಯದಲ್ಲಿ ಇವರು ವಹಿಸುತ್ತಿರುವ ಮುತುವರ್ಜಿ ಹಾಗಾಗಿ ಇವರ ಮೇಲೆ ವಿಶೇಷ ಗೌರವ ಮತ್ತು ಅಭಿಮಾನವಿದೆ ಎಂದು ಹೇಳಿದರು.

ಸಹಕಾರ ಸಂಘಗಳಲ್ಲಿ ಠೇವಣಿ ಇಡುತ್ತಿರುವವರು ಹಿರಿಯ ನಾಗರಿಕರು, ತಮ್ಮ ಜೀವಮಾನದ ಉಳಿತಾಯವನ್ನ ತಮ್ಮ ಕಷ್ಟಕಾಲದಲ್ಲಿ ಉಪಯೋಗಕ್ಕೆ ಬರಲೆಂದು ಇಟ್ಟಿರುತ್ತಾರೆ. ಅದಕ್ಕೆ ಚ್ಯುತಿ ಬರದ ರೀತಿ ಆಡಳಿತ ಮಂಡಳಿಯು ಕಾರ್ಯನಿರ್ವಹಿಸಬೇಕು. ಅಕ್ಕಪಕ್ಕದವರು, ಬಂದುಗಳೆಂದು ಸಾಲ ನೀಡಿ ಕೈಸುಟ್ಟಿಕೊಂಡರೆ ಸಹಕಾರಿಯು ಮುಳುಗಿ ಹೊಗುತ್ತದೆ. ಆದ್ದರಿಂದ ಯಾರಿಗೂ ನ್ಯಾಯ ಒದಗಿಸಬೇಕಾಗಿತ್ತೊ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಯಾವುದೇ ಒತ್ತಡಕ್ಕೆ

ಸಿಲುಕದೆ ಕಾರ್ಯನಿರ್ವಹಿಸಿ, ಠೇವಣಿದಾರರ ಹಿತ ಕಾಪಾಡಬೇಕು. ಸಾಲವನ್ನು ತೆಗೆದುಕೊಳ್ಳುವಾಗ ಹಾಲು ಅನ್ನವನ್ನು ಉಂಡಂತೆ ಸಾಲಿಗನು ಬಂದು ಸಾಲವನ್ನು ಕೇಳುವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ಎಂದು ಗಾದೆ ಮಾತನ್ನು ಹೇಳುವ ಮೂಲಕ ಸಾಲಿಗ ಮತ್ತು ಸಾಲಗಾರನನ್ನು ಬಣ್ಣಿಸಿದರು. ಕಷ್ಟ ಕಾಲದಲ್ಲಿ ಸಹಕಾರಿಯು ನೀಡಿದ ಹಣವನ್ನು ಮರುಪಾವತಿ ಮಾಡಬೇಕು. ಒಳ್ಳೆಯ ಠೇವಣಿದಾರ ಮತ್ತು ಸಾಲಗಾರ–ರಿದ್ದಾಗ ಸಂಸ್ಥೆ ಉತ್ತಮವಾಗಿರುತ್ತದೆ ಎಂದು ಹೇಳಿದರು.

**ಸಂಯುಕ್ತ ಸಹಕಾರಿ ಸಹಕಾರಿಗಳ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಕನಂತೆ – ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**

ಸುರಭಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ 13ನೇ ಸರ್ವ ಸದಸ್ಯರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಂಯುಕ್ತ ಸಹಕಾರಿಯು ಸಹಕಾರಿಗಳಿಗೆ ಫ್ರೆಂಡ್ ಫಿಲಾಸಫರ್ ಗೈಡ್ ಆಗಿ ಕೆಲಸ ಮಾಡುತ್ತಿದೆ. ಯಾವುದೇ ಸಹಕಾರಿಗಳು ಠೇವಣಿದಾರರಿಗೆ ಮೋಸಮಾಡಿದ್ದಲ್ಲಿ ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚ–ರಿಕೆ ನೀಡಿದರು. ಹಾಗೂ ಶ್ರೀ ಗುರುರಾಘವೇಂದ್ರ ಸಹಕಾರಿ ಬ್ಯಾಂಕ್ ನ ಸಮಸ್ಯೆಯನ್ನು ಆದಷ್ಟು ಬೇಗ ಮಾನ್ಯ ಶಾಸಕರಾಧ ಶ್ರೀ ರವಿಸುಬ್ರಹ್ಮಣ್ಯ ಹಾಗೂ ಮಾನ್ಯ ಸಂಸದರಾದ ಶ್ರೀ ತೇಜಸ್ವಿ ಸೂರ್ಯ ರವರ ಸಹಾಯದಿಂದ ಬಗೆಹರಿಸಲಾಗುವುದು ಎಂದು ತಿಳಿಸಿದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಗುರುಪುರ–ಕೈಕಂಬ ಶಾಖೆಯ ಉದ್ಘಾಟನೆ



**ಮಂಗಳೂರು** : ಮಂಗಳೂರು ತಾಲ್ಲೂಕು ಕಂದಾವರ ಗ್ರಾಮದ ಗುರುಪುರ ಕೈಕಂಬದ ಆದಿತ್ಯ ಟವರ್ಸ್‌ಲ್ಲಿ ಕಾರ್ಯಾನಿರ್ವಹಿಸುತ್ತಿದ್ದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಶಾಖೆಯು ಸ್ಥಳಾಂತರಗೊಂಡು ಗುರುಪುರ ಕೈಕಂಬದ ಬಜ್ಪೆ ರಸ್ತೆಯ ಪೊಂಪೈ ಮಾತಾ ವಾಣಿಜ್ಯ ಸಂಕೀರ್ಣದಲ್ಲಿ ದಿನಾಂಕ 17–06–2022ರಂದು ಶುಭಾರಂಭಗೊಂಡಿತು.

ಸ್ಥಳಾಂತರಗೊಂಡ ಶಾಖೆಯನ್ನು ಶ್ರೀ ಶ್ರೀ ಶ್ರೀ ಸ್ವಾಮಿ ವಿವೇಕ ಚೈತನ್ಯಾನಂದಜೀ ಶ್ರೀ ರಾಮಕೃಷ್ಣ ತಪೋವನ ಪೊಳಲಿಯವರು ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಸಂದೇಶ ನೀಡಿ ಸಹಕಾರಿಯು ಸಹಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದೆ ಎಂದರು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಸಹಕಾರಿ ರತ್ನ ಶ್ರೀ ಎಸ್. ಆರ್. ಸತೀಶ್ಚಂದ್ರರವರು ಅಧ್ಯಕ್ಷತೆ ವಹಿಸಿದರು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ ಮಂಗಳೂರು ಇದರ ಅಧ್ಯಕ್ಷರಾದ ಶ್ರೀ ಕೆ.ಪಿ ಸುಚರಿತ ಶೆಟ್ಟಿ, ಕಂದಾವರ ಗ್ರಾಮ ಪಂಚಾಯತ್ ನ ಅಧ್ಯಕ್ಷರಾದ ಶ್ರೀ ಉಮೇಶ್ ಮೂಲ್ಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಹಿರಿಯ ನಿರ್ದೇಶಕರಾದ ಶ್ರೀ ಗುರುಪ್ರಸಾದ್ ಬಂಗೇರರವರು ಭಾಗವಹಿಸಿದರು. ಸಮಾರಂಭದಲ್ಲಿ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಕಂದಾವರ ಗ್ರಾಮಪಂಚಾಯತ್ ನ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಹಸ್ತಾಂತರಿಸಲಾಯಿತು.

ಶಾಖಾ ಕಟ್ಟಡದ ಮಾಲಿಕರಾದ ಶ್ರೀ ಜೋನ್ ಫೆರಿಸ್, ಒಳಾಂಗಣ ವಿನ್ಯಾಸ ಮಾಡಿದ ಶ್ರೀ ಶಿವಪ್ರಸಾದ್ ರೈ, ಹಾಗೂ ಇಲೆಕ್ಟ್ರೀಷಿಯನ್ ಕೆಲಸ ಕಾರ್ಯಗಳನ್ನು ಮಾಡಿದ ಶ್ರೀ ಜೊನ್ಸನ್ ಲೋಬೊ ಇವರುಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು, ನಿರ್ದೇಶಕರುಗಳು ಉಪಸ್ಥಿತರಿದ್ದರು, ಕು ಅಕ್ಷತಾ ಪ್ರಾರ್ಥಿಸಿದರು, ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ರವರು ಸ್ವಾಗತಿಸಿ ಪ್ರಸ್ತಾವನೆಗೈದರು, ಶಾಖೆಯ ವ್ಯವಸ್ಥಾಪಕರಾದ ಶ್ರೀ ಚೇತನ್ ಯು. ಎನ್. ವಂದಾನರ್ಪಣೆಗೈದು ಅಧಿಕಾರಿ ಶಿವಪ್ರಸಾದ್ ಟಿ ಕಾರ್ಯಕ್ರಮ ನಿರೂಪಿಸಿದರು.

ಶಾಖೆಯು ಸ್ಥಳಾಂತರಗೊಂಡು ಶುಭಾರಂಭಗೊಳ್ಳುತ್ತಿರುವ ಸುಸಂದರ್ಭದಲ್ಲಿ ಸಹಕಾರಿಯು ತನ್ನ ಸದಸ್ಯರಿಗೆ ವಿಶೇಷ ಕೊಡುಗೆಗಳನ್ನು ನೀಡುತ್ತಿದ್ದು ದಿನಾಂಕ 17–06–2022 ರಿಂದ 17–09–2022ರವರೆಗೆ ಭೂ ಅಡಮಾನ ಸಾಲಕ್ಕೆ 11.90% ಬಡ್ಡಿ ದರ, ವಾಹನ ಸಾಲಕ್ಕೆ 9.90% ಬಡ್ಡಿದರ ಮತ್ತು ಚಿನ್ನಾಭರಣ ಸಾಲಕ್ಕೆ 10.90 ಬಡ್ಡಿದರವನ್ನು ನಿಗದಿಗೊಳಿಸಲಾಗಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

## ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಶ್ರೀ ಟಿ.ಎಂ ವಿಜಯ ಭಾಸ್ಕರ ಭೇಟಿ

**ಹಾಸನ** : ದಿನಾಂಕ 02.06.2022ರಂದು ಶ್ರೀ ಟಿ.ಎಂ ವಿಜಯ ಭಾಸ್ಕರ್, ಐಎಎಸ್, ಅಧ್ಯಕ್ಷರು, ಆಡಳಿತ ಸುಧಾರಣಾ ಆಯೋಗ– 2, ಶ್ರೀ ಪ್ರಸನ್ನ ಕುಮಾರ್, ಐಎಎಸ್, ನಿವೃತ್ತ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ & ನಿವೃತ್ತ ಸಹಕಾರ ಸಂಘಗಳ ನಿಬಂಧಕರು, ಹಾಗೂ ಪ್ರಸ್ತುತ ಆಡಳಿತ ಸುಧಾರಣಾ ಆಯೋಗದ ಸದಸ್ಯರು, ಶ್ರೀ ಎಸ್. ಶಂಕರ್, ಉಪ ನಿಬಂಧಕರು, ಹಾಸನ ಜಿಲ್ಲೆ, ಮತ್ತು ಶ್ರೀಮತಿ ತೇಜಸ್ವಿನಿ, ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ ಇವರುಗಳು ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಕಛೇರಿಗೆ ಭೇಟಿ ನೀಡಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಕೆ ರಮೇಶ್ ರವರು & ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಎಸ್. ಪದ್ಮಾವತಿ ರವರು ಅಗತ್ಯ ದಾಖಲೆಗಳನ್ನು ಒದಗಿಸಿದರು.

## ವಿಶ್ವ ಯೋಗ ದಿನಾಚರಣೆ

ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗ ಕಛೇರಿಗಳಲ್ಲಿ ಆಚರಿಸಲಾಯಿತು.

## ಉದ್ಘಾಟನಾ ಕಾರ್ಯಕ್ರಮ

**ವಿಜಯಪುರ :** ದಿನಾಂಕ 11 ಜೂನ್ 2022 ರಂದು ದಿ ಜುಮನಾಳ ವಿವಿದೋದ್ಧೇಶಗಳ ಸೌಹಾರ್ದ ಸಹಕಾರಿ ನಿ., ಜುಮನಾಳ ತಾ: ವಿಜಯಪುರ ಸಹಕಾರಿಯ ನೂತನ ಕಛೇರಿ, ದಶಮಾನೋತ್ಸವದ ಮತ್ತು ವಾಣಿಜ್ಯ ಮಳಿಗೆಗಳ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಉಪ್ಪಿನ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಲಲಿತಾಂಬ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ

**ಗದಗ :** ಲಲಿತಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಗದಗ, ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಭೇಟಿ ನೀಡಿ, ಸಹಕಾರಿಯ ವಿವಿಧ ಕಾರ್ಯಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಿದರು, ಈ ಸಂದರ್ಭದಲ್ಲಿ ಸದರಿ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

**ಶ್ರೀ ಸೀತಾರಾಘವ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹೊಸದುರ್ಗ**

| ಆರ್ಥಿಕ ಅಂಶಗಳು | 31.03.2022ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 4,67,83,225 |
| ಒಟ್ಟು ನಿಧಿಗಳು | 5,30,23,739 |
| ಒಟ್ಟು ಠೇವಣಿಗಳು | 1,43,86,43,829 |
| ಒಟ್ಟು ಹೂಡಿಕೆಗಳು | 35,99,72,711 |
| ಒಟ್ಟು ಸಾಲಗಳು | 94,51,65,899 |
| ಇತರೆ ಹೊಣೆಗಾರಿಕೆಗಳು | 8,76,44,531 |

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಸ್ಫೂರ್ತಿ ಕಾವೇರಿ ಸೌಹಾರ್ದ ಕೋ-ಆಪರೇಟಿವ್ ಲಿ., ಮಂಡ್ಯ.**



ಶ್ರೀ ಕೆ.ಎಲ್. ಶಿವರಾಮು
ಅಧ್ಯಕ್ಷರು



ಶ್ರೀ ಕೃಷ್ಣೇಗೌಡ
ಉಪಾಧ್ಯಕ್ಷರು

**ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ**



ಶ್ರೀ ಶಿವಕುಮಾರ ಎಂ.ಎಸ್
ಅಧ್ಯಕ್ಷರು



ಶ್ರೀ ಸುರೇಶ್ ಎಸ್
ಉಪಾಧ್ಯಕ್ಷರು

**ಕೊಪ್ಪಳ :** ದಿ ಕೊಪ್ಪಳ ಯುನೈಟೆಡ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಕೊಪ್ಪಳ ಇದರ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ದಿನಾಂಕ : 24-05-2022 ರಂದು ಸಹಕಾರಿಯ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ ಮೆಹಬೂಬ ಸಾಬ ಇವರ ಅಧ್ಯಕ್ಷತೆಯಲ್ಲಿ ಚುನಾವಣೆ ಸಭೆಯನ್ನು ಜರುಗಿಸಲಾಯಿತು. ಮುಂದಿನ ಐದು ವರ್ಷದ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಶಂಕರಗೌಡ ತಂ ಲಿಂಗನಗೌಡ ಹಿರೇಗೌಡ ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಗಿರೀಶ್ ಪಂಪಾಪತಿ ಇವರನ್ನು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಸಭೆಯಲ್ಲಿ ಚುನಾವಣಾಧಿಕಾರಿಯವರು ಘೋಷಿಸಿದರು.

**ಬೆಳಗಾವಿ :** ದಿನಾಂಕ 21.06.2022 ರಂದು ಶ್ರೀ ಸಾಯಿಶಾಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಇದರ ಆಡಳಿತ ಮಂಡಳಿ ಪದಾಧಿಕಾರಿಗಳ ಚುನಾವಣೆ ನಡೆದಿದ್ದು ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಚಂದ್ರಕಾಂತ ತಿಮ್ಮಣ್ಣಾ ಮಜಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಪ್ರವೀಣ ವಿಶ್ವನಾಥ ಹಿರೇಮಠ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆ ಶಿರಸಿ ಉಪವಿಭಾಗ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಅಧಿಕಾರ ವಹಿಸಿಕೊಂಡ ಶ್ರೀ ಶ್ರೀನಿವಾಸ ಇವರಿಗೆ ಸಂಯುಕ್ತ ಸಹಕಾರಿ ವತಿಯಿಂದ ಶುಭಕೋರಲಾಯಿತು.

# ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ 11ನೇ ವಾರ್ಷಿಕ ಸಾಮಾನ್ಯ ಸಭೆ

**ಬೀದರ :** ಸೌಹಾರ್ದ ಸಹಕಾರಿ ಚಳುವಳಿಯು ಸಾರ್ವಜನಿಕರ, ಸರಕಾರದ ಮತ್ತು ಸಹಕಾರಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಈ ಕ್ಷೇತ್ರದ ಬಗ್ಗೆ ಸಾರ್ವಜನಿಕರ ಆಸಕ್ತಿ ಹಾಗೂ ವಿಶ್ವಾಸಾರ್ಹತೆ ಹೆಚ್ಚುತ್ತಲಿದ್ದು ಪ್ರಗತಿ ವೇಗವು ದಿನೇ ದಿನೇ ಹೆಚ್ಚುತ್ತಲಿರುವುದು ಸಂತೋಷದ ವಿಷಯ ಎಂದು ಒಕ್ಕೂಟ ಸಹಕಾರಿಯ ಅಧ್ಯಕ್ಷ ಗುರುನಾಥ ಜ್ಯಾಂತೀಕರ್ ನುಡಿದರು. ನಗರದ ಸಹಾರ್ದ ತರಬೇತಿ ಸಂಸ್ಥೆ, ನಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 11ನೇ ಸಾಮಾನ್ಯ ಸಭೆಯನ್ನು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಒಕ್ಕೂಟ ಸಹಕಾರಿಯ ಉಪಾಧ್ಯಕ್ಷರಾದ ಸಂಜೀವಕುಮಾರ ಪಾಟೀಲ್ ಮಾತನಾಡಿದರು. ಸಹಕಾರಿಯ ವಾರ್ಷಿಕ ವರದಿಯನ್ನು ರಾಜಶೇಖರ ನಾಗಮುರ್ತಿ ಹಿಂದಿನ ಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ನಿರ್ದೇಶಕರಾದ ಜಗನಾಥ ಕರಂಜೆ, ಲೆಕ್ಕ ಪರಿಶೋಧನ ವರದಿ ಸಂಜಯ ಕ್ಯಾಸಾ ಮಂಡಿಸಿದರು. ಹೊಸದಾಗಿ ಸದಸ್ಯರ ಪಟ್ಟಿಯನ್ನು ಶಿವಬಸಪ್ಪ ಚನ್ನಮಲ್ಲೆ ಅನುಮೊದಿಸಿದರು. ಮುಂದಿನ ಕ್ರಿಯಾ ಯೋಜನೆಯನ್ನು ಶ್ರೀಕಾಂತ ಸ್ವಾಮಿ ಸೋಲಪೂರ ಅನುಮೊದಿಸಿದರು, ಅಂದಾಜು ಆಯಾ ವ್ಯಯ ಕ್ರಾಂತಿಕುಮಾರ ಕುಲಾಲ್ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಹಾಗೂ ಅಂದಾಜುಕ್ಕಿಂತ ಹೆಚ್ಚಾದ ಖರ್ಚು ವೆಚ್ಚಗಳ ಅನುಮೊದನೆ, ಸಂಜೀವಕುಮಾರ ಪಾಟೀಲ್ ಮಂಡಿಸಿದರು. ಸಭೆಯಲ್ಲಿ ನಿರ್ದೇಶಕರಾದ ಸತೀಷ ಪಾಟೀಲ್, ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ, ಹಿರಿಯ ಸಹಕಾರಿಗಳಾದ ಸಂಜೀವಕುಮಾರ ಸಜ್ಜನ್ ಹಾಗೂ ನಾಗರಾಜ ಹಿಬಾರೆ ಅವರನ್ನ ಸನ್ಮಾನಿಸಲಾಯಿತ್ತು. ಒಕ್ಕೂಟ ಸಹಕಾರಿಗೆ ಮಾಣಿಕಪ್ಪ ಗೊರನಾಳೆ, ಡಾ॥ ಅಣ್ಣಾರಾವ ನಾವದಗೆರೆ, ಮಾರುತಿ ವಾಡೆಕರ್. ಶಿವಕುಮಾರ ಸ್ವಾಮಿ,ರಮೇಶ ಕತ್ತೆ, ಸತೀಶ್ ಮುಂತಾದ ಸಹಕಾರಿಗಳಿಗೆ ಸ್ವಾಗತ ಕೊರಲಾಯಿತ್ತು. ಪ್ರಾಥನೆಯನ್ನು ಇಂದುಮತಿ ಪಾಟೀಲ್, ಸಂಜೀವಕುಮಾರ ಪಾಟೀಲ್ ಸ್ವಾಗತಿಸಿದರು, ವೀರಶಟ್ಟಿ ನೀರೂಪಿಸಿದರು, ಸತೀಶ್ ಪಾಟೀಲ್ ವಂದಿಸಿದರು. ಸಭೆಯಲ್ಲಿ ಹಿರಿಯ ಸಹಕಾರಿಗಳು ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿಗಳು ಭಾಗವಹಿಸಿದರು.



**ಕಲಬುರಗಿ :** ದಿನಾಂಕ 10.06.2022 ರಂದು ಕೃಷ್ಣಾ ಪರಿವಾರ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರಗಿ ಇದರ ಉದ್ಘಾಟನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಉಪನಿರ್ದೇಶಕರಾದ ಶ್ರೀ ಸುಭಾಷಚಂದ್ರ ಬರ್ಮಾ ರವರು ನೇರವರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಕಿಶೋರಕುಮಾರ ಪಾಟೀಲರವರು, ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಸಿಸ್ಟೆಂಟ್ ಜನರಲ್ ಮ್ಯಾನೇಜರಾದ ಶ್ರೀ ಗುರುರಾಜ ಎಸ್ ರವರು ಭಾಗವಹಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಮುಕಯ್ಯಾ ಪಾಟೀಲರವರು ಅಧ್ಯಕ್ಷತೆ ವಹಿಸಿದರು.



**ಕೊಪ್ಪಳ :** ಐ.ಎ.ಎಸ್ ನಲ್ಲಿ 191 ನೇ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಹೆಮ್ಮೆಯ ಸಹೋದರಿ ಕುಮಾರಿ ಅಪೂರ್ವ ಬಾಸೂರ ರವರಿಗೆ ಋಷಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಗೌರವಾನ್ವಿತರಾದ ಶ್ರೀ ಸೋಮಶೇಖರ್ ಸರ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಲಿಟಲ್ ಹಾರ್ಟ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಪ್ರಿಯಾಕುಮಾರಿ ಪೋಲಿನಾ ಮೇಡಮ್, ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದ ಕೊಟ್ರಪ್ಪ ಅಕ್ಕಿ, ಉಪಾಧ್ಯಕ್ಷರಾದ ಶ್ರೀ ಸೋಮಶೇಖರ್ ಸಿಂಗನಾಳ, ನಿರ್ದೇಶಕರಾದ ಶ್ರೀ ರವಿಚೈತನ್ಯ ರೆಡ್ಡಿ, ಶ್ರೀ ಶರಣಪ್ಪ ಸಿದ್ರಾಂಪೂರ,ಶ್ರೀ ಚಂದ್ರು ಕಾಟವಾ ಹಾಗೂ ಶ್ರೀ ಚಿದಾನಂದ ರಾಯಬಾಗಿಯವರು ಉಪಸ್ಥಿತರಿದ್ದು ಎಲ್ಲಾ ಗಣ್ಯರಿಗೆ ಗೌರವಿಸಲಾಯಿತು.

# "ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳೆರಡನ್ನು ಎತ್ತಿ ಹಿಡಿಯುವ ಏಕೈಕ ವ್ಯವಸ್ಥೆಯೇ ಸಹಕಾರ ಚಳುವಳಿ"

– ಶ್ರೀ ಶಂಕರ ಹೆಗಡೆ

**1. ಹಿನ್ನೆಲೆ**

ಈಗ ಪ್ರಪಂಚದಲ್ಲಿ ಹಲವು ಆರ್ಥಿಕ ಪದ್ಧತಿಗಳು ಜಾರಿಯಲ್ಲಿವೆ. ಅವುಗಳಲ್ಲಿ ಬಂಡವಾಳವಾದ ಮತ್ತು ಸಾಮ್ಯವಾದಗಳು ಪ್ರಭಲವಾಗಿವೆ. ಈ ಎರಡೂ ಆರ್ಥಿಕ ಪದ್ಧತಿಗಳಲ್ಲಿ ಅನೇಕ ನ್ಯೂನತೆಗಳು ಕಂಡುಬರುತ್ತಿವೆ. ಇಂದಿನದು "ವಾದಗಳ" ಯುಗ ಜೊತೆಗೆ "ವಾದಿಗಳ" ಯುಗವೂ ಹೌದು. ವಾದಗಳು ಬೆಳೆದಷ್ಟು ಅವುಗಳ ಪರವಾಗಿ ವಾದಿಸುವವರ ಸಂಖ್ಯೆಯೂ ಬೆಳೆದಿದೆ.

ಸಹಕಾರ ಒಂದು ಆರ್ಥಿಕ ಪದ್ಧತಿಯಾಗಿ ಪ್ರಪಂಚದಲ್ಲಿ ಅಸ್ಥಿತ್ವಕ್ಕೆ ಬಂದಿದ್ದು 1844 ರಲ್ಲಿ ಇಂಗ್ಲೆಂಡ್ ದೇಶದಲ್ಲಿ ಸಹಕಾರ ಚಳುವಳಿ ಇಂದು ಕೇವಲ ತತ್ವಾದರ್ಶ ವ್ಯವಹಾರ ಮಾತ್ರವೇ ಉಳಿದಿಲ್ಲ. ಅದು ಜೀವನದ ಅವಿಭಾಜ್ಯ ಅಂಗವಾಗಿದೆ. "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಸಹಕಾರ ವ್ಯವಸ್ಥೆ ಸಮಾಜದ ಎಲ್ಲಾ ಆಯಾಮಗಳನ್ನು ಆವರಿಸಿದೆ ಮತ್ತು ಆರ್ಥಿಕ ಚಟುವಟಿಕೆಗಳ ಪ್ರೇರಕ ಶಕ್ತಿಯಾಗಿ ಸಹಕಾರ ವ್ಯವಸ್ಥೆ ಬಂಡವಾಳ ಶಾಹಿ ಮತ್ತು ಸಮತಾವಾದದ ನಡುವಿನ ಸುವರ್ಣ ಮಾಧ್ಯಮವೆನಿಸಿದೆ. ಭಾರತದಲ್ಲಿ 117 ವರ್ಷಗಳ ಭವ್ಯ ಇತಿಹಾಸವುಳ್ಳ ಈ ಸಹಕಾರ ಚಳುವಳಿ ಮೂಲತಃ ರೈತರಿಗೆ ಸಾಲವನ್ನು ಒದಗಿಸುವ ಸಾಧನವಾಗಿ ಪ್ರಾರಂಭಗೊಂಡರೂ ಇಂದು ಅದು ಕೃಷಿ, ಪತ್ತು, ಮಾರಾಟ, ಹೈನುಗಾರಿಕೆ, ಬ್ಯಾಂಕಿಂಗ್, ಗೃಹ ನಿರ್ಮಾಣ, ಸಕ್ಕರೆ, ಕೃಷಿಯೇತರ ಪತ್ತು, ಗ್ರಾಹಕ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಪಾಲುದಾರ ವ್ಯವಸ್ಥೆಯಾಗಿ ಮುಂದುವರೆದಿದೆ. ಸಹಕಾರವು ಸಮಾಜವನ್ನು ಮತ್ತು ರಾಷ್ಟ್ರವನ್ನು ಭದ್ರ ಬುನಾದಿಯ ಮೇಲೆ ನಿರ್ಮಾಣ ಮಾಡಬಲ್ಲ ಅದ್ಭುತ ಶಕ್ತಿಯಾಗಿ ಹೊರ ಹೊಮ್ಮಿದೆ.

"ತಾನು ಎಲ್ಲರಿಗಾಗಿ" ಹಾಗೂ "ಎಲ್ಲರೂ ತನಗಾಗಿ" ಎಂಬುದು ಸಹಕಾರದ ಮೂಲ ಮಂತ್ರ ಆದರೆ ಒಬ್ಬ ಎಲ್ಲರಿಗಾಗಿ ಎಲ್ಲರೂ ಒಬ್ಬರಿಗಾಗಿ ಎಂಬುದು ಬಂಡವಾಳ ವಾದದ / ಸಾಮ್ಯವಾದದ ಕೂಗು.

ಶೋಷಣೆರಹಿತ ಮತ್ತು ವರ್ಗರಹಿತ ಸಮಾಜದ ನಿರ್ಮಾಣವೇ ಸಹಕಾರದ ಮೂಲ ಉದ್ದೇಶ ಅಲ್ಲದೇ ಸಂಪತ್ತಿನ ಸಮ ವಿತರಣೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

**ಪ್ರಜಾಪ್ರಭುತ್ವ ಪದ್ಧತಿ :**

ಇದು ಸಹಕಾರ ತತ್ವದ 2ನೇ ಅತಿ ಪ್ರಾಮುಖ್ಯವಾದ ತತ್ವವಾಗಿದ್ದು ಸಹಕಾರದ ಪದ್ಧತಿ ಒಂದು ಉತ್ತಮ ಪ್ರಜಾಪ್ರಭುತ್ವದ ಪದ್ಧತಿಯಾಗಿ ಸದಸ್ಯರುಗಳಿಗೆ ಸಮನಾದ ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ನೀಡುತ್ತದೆ. ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯಲ್ಲಿ ದೇಶದ ಆಗು–ಹೋಗುಗಳನ್ನು ನಿರ್ಧರಿಸುವ ಹಕ್ಕು ಜನತೆಯದು. ಅಂತೆಯೇ ಸಹಕಾರಿ ಸಂಸ್ಥೆಯಲ್ಲಿ ಆಗು–ಹೋಗುಗಳನ್ನು ನಿರ್ಧರಿಸುವ ಪರಮೋಚ್ಚ ಅಧಿಕಾರ ಸಾಮಾನ್ಯ ಸದಸ್ಯರುಗಳದ್ದು. ಸದಸ್ಯರುಗಳೇ ಸಹಕಾರ ಸಂಘಗಳ ನಿಜವಾದ ಒಡೆಯರು ಅಥವಾ ಮಾಲೀಕರು.

ಆದರೆ ಇತ್ತೀಚಿನ ದಿನಗಳಲ್ಲಿ ಬಾಹ್ಯ ಮೂಲಗಳ ಅನಪೇಕ್ಷಿತ ಹಸ್ತಕ್ಷೇಪದಿಂದ ಸದಸ್ಯರ ಅಧಿಕಾರಗಳನ್ನು ಮೊಟಕುಗೊಳಿಸಲಾಗುತ್ತಿದೆ. 97ನೇ ಸಂವಿಧಾನ ತಿದ್ದುಪಡಿ ಹಾಗು ಸೌಹಾರ್ದ ಸಹಕಾರ ವ್ಯವಸ್ಥೆ ತುಸು ಮಟ್ಟಿಗೆ ಸದಸ್ಯರುಗಳಿಗೆ ಹೆಚ್ಚಿನ ಸಾರ್ವಭೌಮತ್ವ ನೀಡಿರುವುದು ಎದ್ದು ಕಾಣುತ್ತದೆ. ಸಹಕಾರಿ ಕಾನೂನು ರೂಪಿಸುವಾಗ ಇಲ್ಲವೇ ತಿದ್ದುಪಡಿ ಮಾಡುವಾಗ ಹಿರಿಯ ಹಾಗೂ ತಜ್ಞ ಸಹಕಾರಿಗಳ ಅಭಿಪ್ರಾಯ ಹಾಗೂ ಅನುಭವಗಳಿಗೆ ಮನ್ನಣೆ ಸಿಗುತ್ತಿಲ್ಲ ಎಂಬ ಧ್ವನಿ ಕೇಳಿ ಬರುತ್ತದೆ. ಈ ಬಗ್ಗೆ ಸಂಬಂಧ ಪಟ್ಟವರು ಆದ್ಯ ಗಮನ ನೀಡಲು ಈ ಮೂಲಕ ಕೋರಿದೆ.

**ಸಮಾನತೆ :**

ಸಹಕಾರ ಪದ್ಧತಿಯಲ್ಲಿ ಮೇಲು ಕೀಳೆಂದು ಭೇದವಿರುವುದಿಲ್ಲ. ಅದು ಎಲ್ಲರನ್ನು ಸಮಾನ ದೃಷ್ಟಿಯಿಂದಲೇ ಕಾಣುವುದು. ಇದು ಈ ಪದ್ಧತಿಯ ಒಂದು ವೈಶಿಷ್ಟ್ಯವಿದೆ. ರಾಜಕೀಯ ಧಾರ್ಮಿಕ ಜಂಜಾಟದಲ್ಲಿ ಸೇರದಿರುವುದು ಸಹಕಾರದ ಇನ್ನೊಂದು ದೊಡ್ಡ ಗುಣ. ಸಹಕಾರಿಯಾದವನು ಯಾವ ರಾಜಕೀಯ ತತ್ವದ ಪ್ರತಿಪಾದಕನಾದರೂ ಆಗಿರಬಹುದು ಆದರೆ ಸಹಕಾರಿ ಸಂಸ್ಥೆಯಲ್ಲಿ ರಾಜಕೀಯ ವಿಚಾರಗಳನ್ನು ತರ ಕೂಡದು ಅಂತೆಯೇ ಧಾರ್ಮಿಕ ವಿಚಾರಗಳಲ್ಲಿ ಸಹಕಾರಿ ಸಂಸ್ಥೆ ಸಂಪೂರ್ಣ ನಿರ್ಲಿಪ್ತತೆ ಹೊಂದಿದೆ.

**ಉಪಸಂಹಾರ :**

ಒಟ್ಟಿನಲ್ಲಿ ಸಹಕಾರಿ ತತ್ವ ಮೌಲ್ಯಗಳ ಬಗೆಗೆ ಇನ್ನೂ ಹೆಚ್ಚಿನ ವ್ಯಾಪಕ ಅರಿವು ಮೂಡಿಸಬೇಕಾಗಿದೆ. ಜೊತೆಗೆ ಉತ್ತಮ ನಾಯಕತ್ವ ಪ್ರಾಮಾಣಿಕತೆ ಬದ್ಧತೆ ಮುಂತಾದ ಗುಣಗಳುಳ್ಳ ಸಹಕಾರಿ ನಾಯಕತ್ವ ಕೆಳಮಟ್ಟದಿಂದಲೂ ಬೆಳೆದು ಬರಬೇಕಾಗಿದೆ. ಸ್ವಾಭಿಮಾನಿ ಸಹಕಾರಿ ಸಂಸ್ಥೆಗಳು ಹಾಗೂ ಮಾನ್ಯ ಪ್ರಧಾನಮಂತ್ರಿ ಆತ್ಮ ನಿರ್ಭರತೆಯ ಅಂಶಗಳು ಈ ಸಂಸ್ಥೆಗಳಲ್ಲಿ ಹಾಸು ಹೊಕ್ಕಾಗಿ ಬೆಳೆಯಬೇಕಾಗಿದೆ. ಇತ್ತೀಚೆಗೆ ರಾಜ್ಯ ಮಾನ್ಯ ಸಹಕಾರ ಸಚಿವರು ತಮ್ಮ ಒಂದು ಸಂದೇಶದಲ್ಲಿ ತಿಳಿಸಿರುವಂತೆ ರಾಜ್ಯದಲ್ಲಿರುವ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಸಮಾಜದ ಮುಖ್ಯವಾಹಿನಿಗೆ ಕರೆ ತರುವ ಉದ್ದೇಶವನ್ನು ಕರ್ನಾಟಕ ಸರ್ಕಾರ ಇಟ್ಟುಕೊಂಡಿದೆ ಎಂದು ಹೇಳಿರುವುದು ನಿಜಕ್ಕೂ ಅಭಿನಂದನೀಯ ಮತು ಶ್ಲಾಘನೀಯ.

ರಾಜ್ಯದ ಸಹಕಾರ ಚಳುವಳಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಸಮಸ್ಯೆಗಳ ನಿವಾರಣೆಗೆ ಕಾಲಕಾಲಕ್ಕೆ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಚಿಂತನ–ಮಂಥನ ಕಾರ್ಯಕ್ರಮಗಳು ಜರುಗಿ ಸಹಕಾರಿಗಳ ಆಶೋತ್ತರಗಳಿಗೆ ಸಮರ್ಪಕವಾದ ಪರಿಹಾರ ಕಂಡುಕೊಳ್ಳಲು ಸತತ ಪ್ರಯತ್ನ ಅವಶ್ಯಕ. ಈ ದಿಶೆಯಲ್ಲಿ ಸಂಬಂಧ ಪಟ್ಟ ಸಂಘ ಸಂಸ್ಥೆಗಳು ಗಮನ ಹರಿಸಿ ರಾಜ್ಯ ಸಹಕಾರಿ ಚಳುವಳಿಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವುದು ನಮ್ಮೆಲ್ಲರ ಗುರಿಯಾಗಬೇಕು. ಈ ಬಗ್ಗೆ ನಾವೆಲ್ಲರೂ ಚಿಂತನ ಮಾಡುವುದು ಇಂದಿನ ಆದ್ಯತೆ ಮತು ಸಕಾಲಿಕ.

**ಸಹಕಾರ ಚಿರಾಯುವಾಗಲಿ**

# ಆಹಾರ ಆರೋಗ್ಯ- 2

– ಶ್ರೀಮತಿ ಅನೂರಾಧ ಶ್ರೀಧರ್

ಹಿಂದಿನ ಸಂಚಿಕೆಯಲ್ಲಿ ಆರೋಗ್ಯದ ಗುಣಮಟ್ಟ ಹೇಗೆ ಕಡಿಮೆಯಾಗುತ್ತಾ ಸಾಗುತ್ತಿದೆ ಎಂಬುದನ್ನು ನೋಡಿದೆವು. ಅದಕ್ಕೆ ಕಾರಣವೇನೆಂಬುದನ್ನು ಈಗ ನೋಡೋಣ ನಮ್ಮ ಆಧುನಿಕ ಅಡುಗೆ ಮನೆಯ ಚಿತ್ರಣವನ್ನೊಮ್ಮೆ ನೆನೆಸಿಕೊಳ್ಳೋಣ. ವಿಶಾಲವಾದ ನೋಡಲು ಸುಂದರವಾದ ಹೊಗೆ ಮುಕ್ತವಾದ ಅತ್ಯಾಧುನಿಕ ಉಪಕರಣಗಳಿಂದ ಕೂಡಿದ ಅಡುಗೆ ಮನೆ ನಮ್ಮ ಎತ್ತರಕ್ಕೆ ಸರಿಹೊಂದುವಂತೆ ಅಳತೆ ಮಾಡಿ Cooking table ಅಲ್ಲೇ ಒಂದು ಬದಿಗೆ ಮಿಕ್ಸರ್, ಗ್ರೈಂಡರ್, ಸ್ವಲ್ಪ ದೂರದಲ್ಲೇ ಓವನ್, ಸ್ವಲ್ಪ ಅತ್ತ ಕಡೆಗೆ ಡಿಷ್‌ವಾಷರ್ ಇನ್ನೊಂದು ಬದಿಗೆ ಪಾತ್ರೆ ತೊಳೆಯಲು ಜಾಗ, ಸದಾ ನೀರುಬರುವ ನಳ (ನಲ್ಲಿ) ಡಬ್ಬಿಗಳು ಪಾತ್ರೆಗಳನ್ನಿಡಲು ಮುಚ್ಚಿದ ಸ್ಥಳ ಒಟ್ಟಿನಲ್ಲಿ ಎಲ್ಲೆಲ್ಲಾ ಅಚ್ಚುಕಟ್ಟು ಇಂತಹ ಕಡೆ ನಿಂತು ಅಡುಗೆ ಮಾಡುವುದೇ ಒಂದು ಸಂತಹ. ಹೆಚ್ಚಿಗೆ ಹೊತ್ತು ಅಲ್ಲೇ ಕಳೆಯೋನ ವೆಂದುಕೊಂಡರೆ ಸಮಯವೇ ಇರುವುದಿಲ್ಲ. ಹಾಗಾಗಿ ಬೆಳಿಗ್ಗೆ 1 ಗಂಟೆ ಮೂವತ್ತು ನಿಮಿಷಗಳು ಹಾಗೂ ರಾತ್ರಿ ಅರ್ಧ ಗಂಟೆ ಅಲ್ಲಿದ್ದರೆ ಮುಗಿಯಿತು ನಮ್ಮ ಕೆಲಸ. ಏಕೆ ಆಶ್ಚ ರ್ಯವಾಯಿತೇನು? ಇಲ್ಲ ಅದೇ ಸತ್ಯ. ಎಲ್ಲ ಕೆಲಸಗಳನ್ನೂ ನಿಗದಿತ ಸಮಯದಲ್ಲಿ ಮಾಡುವುದನ್ನು ನನ್ನ ಆಧುನಿಕ ಜೀವನ ನನಗೆ ಚೆನ್ನಾಗಿ ಕಲಿಸಿಬಿಟ್ಟಿದೆ. ಪ್ರತೀ ಭಾನುವಾರ ಮಾಲ್‌ಗೆ ಹೋಗಿ ಹೆಚ್ಚಿರುವ ತರಕಾರಿಗಳನ್ನೇ (ಸಣ್ಣದು, ದೊಡ್ಡದು) ತಂದು ಫ್ರಿಡ್ಜ್‌ನಲ್ಲಿಟ್ಟು ಬಿಡುತ್ತೇನ. ಬೆಳ್ಳೀಗೆ ಕೊಕ್ಕರೆಯ ರೆಕ್ಕೆಯಂತಿರುವ ಅಕ್ಕಿಯೂ ಅಲ್ಲೇ ಸಿಗುತ್ತದೆ. ಎಲ್ಲಾ ದಿನಸಿಯೂ ಅಲ್ಲೇ ಸಿಗುವ ಕಾರಣ ಒಟ್ಟಿಗೇ ತಂಡು ಬಿಡುತ್ತೇನೆ. ಎಲ್ಲಾ ಕ್ಲೀನ್ಡ್ ಆರಿಸುವ ಗೋಜೂ ಇಲ್ಲ –ಹುಳು ಹುಪ್ಪಟಗಳೂ ಇಲ್ಲ. ಎಲ್ಲೆಲ್ಲಾ ಸ್ವಚ್ಛತೆ ಇಂತಹ ಸ್ವಚ್ಛ ದಿನಸಿಯನ್ನು ತಂದು ಬಣ್ಣ ಬಣ್ಣದ ಪ್ಲಾಸ್ಟಕ್ ಡಬ್ಬಿಗಳಲ್ಲಿ ತುಂಬಿಸಿಟ್ಟರೆ ನೋಡಲು ಕಣ್ಣಿಗೆ ಹಬ್ಬ. ಎಲ್ಲವೂ ಬಹಳ ಸುಲಭದಲ್ಲಿ ಸಿಕ್ಕುವಂತಾಗಿರುವ ಕಾರಣ ಹೆಚ್ಚಿನ ತಲೆನೋವಿಲ್ಲ. ಅಡುಗೆ ಮನೆಯ ರೂಪವೇ ಹೀಗೆ ಬದಲಾದ ಮೇಲೆ ಅಡುಗೆಯ ರೂಪವೂ ಬದಲಾಗುವುದೇನೂ ತಪ್ಪಿಲ್ಲ ಬಿಡಿ.

ಬೆಳಗ್ಗೆ ಬೇಗನೆ ಅವಸರ ಅವಸರವಾಗಿ ಆಫೀಸಿಗೆ ಹೊರಡುವ ಪತಿಗೆ, ಪತ್ನಿಗೆ ಮತ್ತು ಶಾಲೆಗೆ ಹೊರಡುವ ಮಗುವಿಗೆ ಮೂವರಿಗೆ ಡಬ್ಬಿ ಊಟವೇ ಗತಿ. ಮನೆಯಲ್ಲಿರುವ ಅತ್ತೆ ಮಾವನಿಗೆ ಹಾಟ್ ಬಾಕ್ಸೇ ಗತಿ. ಬೆಳಿಗ್ಗೆ ಐದಕ್ಕೆ ಎದ್ದರೆ ಮಾತ್ರ ಇವೆಲ್ಲ ಮಾಡಲು ಸಾಧ್ಯ. ಹಾಗಾಗಿ ರಾತ್ರಿಯೇ ಎಲ್ಲವನ್ನೂ ಜೋಡಿಸಿಟ್ಟು ಕೊಳ್ಳಬೇಕು. ದೊಡ್ಡ ಕುಕ್ಕರ್ ಈಗ ನನ್ನ ಸಹಾಯಕ್ಕೆ ಬರುತ್ತದೆ. ಕುಕ್ಕರ್ ತಳಕ್ಕೆ ಸ್ವಲ್ಪ ನೀರು ಹಾಕಿ ಮೊದಲು ಬಟ್ಟಲಲ್ಲಿ ಸಾಕಷ್ಟು ಬೇಳೆ. ಎರಡನೇ ಬಟ್ಟಲಲ್ಲಿ ಅಕ್ಕಿ, ಮೂರನೇ ಬಟ್ಟಲಲ್ಲಿ ಅರ್ಧ ಭಾಗ ತರಕಾರಿಯ ದೊಡ್ಡ ಹೋಳುಗಳು ಮತ್ತರ್ಧ ಭಾಗಕ್ಕೆ ತರಕಾಯಿಯ ಸಣ್ಣ ಹೊಳುಗಳು ಮೇಲೆ ಸಣ್ಣ ತಟ್ಟೆಯಲ್ಲಿ ಟೊಮೊಟೊ, ಕುಕ್ಕರ್ ಏಳು ಸೀಟಿ ಹಾಕುವಷ್ಟರಲ್ಲಿ ಚಪಾತಿಯ ಹಿಟ್ಟು ನಾದು ತಲೆಗೆರಡರಂತೆ ಚಪಾತಿಗಳು ಅಷ್ಟರಲ್ಲಿ ಕುಕ್ಕರ್ ಆರಿರುವ ಕಾರಣ ಚಪಾತಿ ಮುಗಿದ ತಕ್ಷಣ ಅನ್ನವನ್ನು ಹೊರ ತೆಗೆದಿಟ್ಟು, ಸಾಂಬಾರ್, ರಸಂ, ರೆಡಿ ಮಾಡುವುದು, ಬೆಂದ ಬೇಲೆಯ ಅರ್ಧ ಪ್ರಮಾಣ ಸಾಂಬಾರ್‌ಗೆ, ಅರ್ಧ ಪ್ರಮಾಣ ರಸಂಗೆ ಎಂದು ಬೇರ್ಪಡಿಸುವುದು

ಸಾಂಬಾರ್ ಇಟ್ಟು ಕೊಂಡ ಬೇಳೆಗೆ ಬೆಂದ ತರಕಾಯಿ ದೊಡ್ಡ ಹೋಳುಗಳನ್ನು ಸೇರಿಸಿ ಸಾಂಬಾರ್ ಪುಡಿ, ರಸಂಪುಡಿ, ಉಪ್ಪು, ಹುಣಸೇರಸ, ತಂಗಳ ಪಟ್ಟಿಗೆಯಿಂದ ತೆಗೆದ ಕಾಯಿತುರಿ ಹಾಕಿ ಕುದಿಸಿದರೆ ಹೊಟೇಲ್ ಸಾಂಬಾರ್‌ದೇ ರೀತಿಯ ಸಾಂಬಾರ್ ರೆಡಿ ( ಹಾತಂತ ನನ್ನ ಮಕ್ಕಳು ಹೇಳುತ್ತಾರೆ) ಮಿಕ್ಕರ್ಧ ಬೇಳೆಗೆ ತಟ್ಟೆಯಲಿ ಕುಕ್ಕರ್‌ನಲ್ಲಿಟ್ಟು ಬೇಯಿಸಿದ ಟೊಮೊಟೋ, ಕಿವುಚಿ, ಕಾಯಿತುರಿ ಹಾಕಿ, ರಸಂ ಪೌಡರ್ ಬೆರಿಸಿ, ಉಪ್ಪು ಬೆಲ್ಲ ಸೇರಿಸಿ, ಹುಣಸೇ ರಸ ಹಾಕಿ ಕುದುಯುವುದಕ್ಕೆ ಒಗ್ಗರಣೆ ಸೇರಿಸಿದರೆ ಘಮ್ಮನ್ನುವ ರಸಂ ರೆಡಿ ಸಣ್ಣದಾಗಿ ಹೆಚ್ಚಿ ಬೇಯಿಸಿದ ತರಕಾರಿ ಹೊಳೂಗಳಿಗೆ ಗರಂ ಮಸಾಲಾ, ಬೇರೆ ಬೇರೆ ಮಸಾಲಾ ಪುಡಿಗಳನ್ನು ಹಾಕಿ ಪಲ್ಯ ಕಲೆಸಿ ಅನ್ನಕ್ಕೆ ಸೇರಿಸಿದರೆ ತಿಂಡಿ ಡಬ್ಬಿ ರೆಡಿ, ಚಪಾತಿಗೂ ಅದೇ ಪಲ್ಯ ಬೇಸರವನಿಸಿದರೆ ಶೇಂಗಾಪುಡಿ, ಚಟ್ನಿ ಪುಡಿ (ಒಳ್ಳೆಯ ಹೆಸರಿರುವ ಕಂಪನಿಗಳಿಂದ ತಂದದ್ದು) ತುಪ್ಪ ಸಕ್ಕರೆ ಹೀಗೆ ಯಾವುದಾದರೊಂದಿದ್ದರೆ ನಡೆದೀತು. ಉಸ್ಸಪ್ಪಾ ಇಷ್ಟೆಲ್ಲಾ ತರಾತುರಿಯಲ್ಲಿ ಮಾಡಿ ಡಬ್ಬಿಗಳಿಗೆ ತುರುಕಿ ಹೊರ ಬರುವಷ್ಟರಲ್ಲಿ ಆಗಲೇ ಬೆಳಗಿನ ಆರೂವರೆ ಗಂಟೆ ಇನ್ನು ಸ್ಥಾನ ಮುಗಿಸಿ ಚಿಣಮಿಣಿ ಬಟ್ಟೆ ಧರಸಿ ಆಫೀಸ್‌ಗೆ ಹೊರಟಾಗ ಏಳು ಗಂಟೆ ಪ್ರಯಾಣಕ್ಕೆರಢು ಗಂಟೆ ಆಫಿಸ್‌ಗೆ ಗಲುಪುವಷ್ಟರಲ್ಲಿ ಒಂಭತ್ತು ಗಂಟೆ ಆಫೀಸಿನಲ್ಲಿ ಕತ್ತೆ ತರ ದುಡಿದು ಮನೆಗೆ ವಾಪಾಸು ಬರುವಷ್ಟರ್ಲಲಿ ರಾತ್ರಿ ಏಳು ಗಂಟೆ ಬೆಳಗ್ಗಿನ ರಸಂ. ಸಾಂಬಾರ್ ಸ್ವಲ್ಪ ಉಳಿದಿರುವ ಕಾರಣ ರೈಸ್ ಕುಕ್ಕರ್‌ನಲ್ಲಿ ಅನ್ನಕ್ಕಿಟ್ಟರೆ ಮುಗಿಯಿತು ರಾತ್ರಿ ಅಡುಗೆ, ಉಂಡು ಉಸ್ಸಪ್ಪಾ ಎಂದು ಕೂತರೆ ಮುಗಿಯಿತು. ಒಂದು ದಿನ ಮುಂದೆ ಇವುಗಳದೇ ಪರಿವರ್ತನ ಇಷ್ಟೆಲ್ಲಾ ತಿಂದರೂ ಸದಾ ಸುಸ್ತು, ಶರೀರಕ್ಕೂ ನೆಮ್ಮದಿ ಇಲ್ಲ ಮನಸ್ಸಿಗೂ, ಮಗಳ ಮುಂದೆ ಹೀಗೆ ಅಂದೆ ಅದಕ್ಕೆ ಅವರಜ್ಜೆ ಅಂದರೆ ನಮ್ಮತ್ತೆ ಬಂದುಕೂಕು ನಿರಾಳವಾಗಿ ಅವರ ಅಡುಗೆ ಮನೆ ಬಗ್ಗೆ ಮೊಮ್ಮಗಳಿಗೆ ಕತೆ ಹೇಳಿದರು ಅದೇನೆಂದು ಮುಂದಿನ ಸಂಚಿಕೆಯಲ್ಲಿ ನೋಡೋಣ.

# 100ನೇ ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು " ಸಹಕಾರಿ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸುತ್ತವೆ" ಎಂಬ ಧ್ಯೇಯ ವಾಕ್ಯದೊಂದಿಗೆ ವಿಶೀಷ್ಟವಾಗಿ ಆಚರಿಸೋಣ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ವಿಭಾಗ.

ಇಂದು ಜಗತ್ತು ಪ್ರಪಾತದ ಅಂಚಿನಲ್ಲಿದೆ ಮತ್ತು ತಪ್ಪು ದಿಕ್ಕಿನಲ್ಲಿ ಚಲಿಸುತ್ತಿದೆ ಎಂದು ಎಚ್ಚರಿಸಿದ ಯುಎಎನ್ ನ ಕಾರ್ಯದರ್ಶಿ ಜನರಲ್–ಅಮಟೋನಿಯಯೋ ಗುಟೆರೆಸ್ ಅವರ ಎಚ್ಚರಿಕೆಯ ಕರೆ ನೀಡುತ್ತ ಜೊತೆಗೆ ಸಹಕಾರಿಗಳು ಉತ್ತರಿಸುತ್ತಿದ್ದಾರೆ ಮತ್ತು ನಂಬಿಕೆಯನ್ನು ಪುನಸ್ಥಾಪಿಸಲು ಮತ್ತು ಭರವಸೆಯನ್ನು ಇಡೆಯರಲು ನಮಗೆ ಸಹಕಾರ ಬೇಕು, ಎಂದಿದ್ದಾರೆ

ಸಹಕಾರ ಚಳುವಳಿಯು ಪುರಾತನವಾದುದು ಲೆಕ್ಕಕ್ಕೆ ಸಿಗದಷ್ಟು ಕಾಲದಿಂದ ಚಾಲ್ತಿಯಲ್ಲಿರುವುದು, ಪ್ರಕೃತಿ ಮತ್ತು ಸಹಕಾರವು ಬೇರ್ಪಡಿಸಲಾಗದಂತೆ ಸೃಷ್ಠಿಯಲ್ಲಿ ಬೆರೆತು ಹೋಗಿವೆ. ಆದ್ದರಿಂದಲೆ ಹಿರಿಯರು ಸಹಕಾರವು ಸೃಷ್ಟಿಯ ಸಾರ್ವತ್ರಿಕ ಸಾಧನವೆಂದು ಕರೆದಿದ್ದಾರೆ.

ಸಹಕಾರವು ಮಾನವ ನಾಗರಿಕತೆಯೊಂದಿಗೆ ರೈಲ್ವೆ ಹಳಿಯಂತೆ ಸಾಗುತ್ತಿದೆ, ಒಬ್ಬ ಮನುಷ್ಯ ತನ್ನೆಲ್ಲಾ ಬೇಡಿಕೆಗಳನ್ನು ತಾನೇ ಪೂರೈಸಿಕೊಳ್ಳಲು ಸಾಧ್ಯವಿಲ್ಲ. ಪರಸ್ಪರ ಅವಲಂಬನೆ, ಪರಸ್ಪರ ಅನಿವಾರ್ಯ. ಪ್ರಾರಂಭದಲ್ಲಿ ಆಹಾರ ಹುಡುಕಾಟ, ಭೇಟೆ ಮಾಡುವುದು, ರಕ್ಷಣೆ ನಂತರ ಕೃಷಿ ಚಟುವಟಿಕೆ ಹಾಗೂ ಪ್ರಸ್ತುತ ಅಧುನಿಕ ಉತ್ಪಾದನೆಯಲ್ಲಿ ಮನುಷ್ಯರ ನಡುವೆ ಸಹಕಾರ ನಿಧಾನವಾಗಿ ವಿಸ್ತರಿಸುತ್ತಾ ಬೆಳೆಯುತ್ತಾ ಬಂದಿದೆ ಮತ್ತು ಮುಂದೆ ಸಹ ಬೆಳೆಯುತ್ತದೆ.

ಪ್ರಾಚೀನ ಕಾಲದಲ್ಲಿ ಜನಸಂಖ್ಯೆ ವಿರಳವಿದ್ದುರಿಂದ ಬೇಡಿಕೆ ಸಹ ಕಡಿಮೆ ಇದ್ದ ಕಾರಣ ತಮಗೆ ಬೇಕಾದುದನ್ನು ತಾವೇ ಉತ್ಪಾದಿಸಿಕೊಂಡು ಜೀವಿಸುತ್ತಿದ್ದರು. ನಾಗರಿಕತೆ ಬೆಳೆದಂತೆ ಮಾನವನ ಆಲೋಚನೆ ಶಕ್ತಿ ಹೆಚ್ಚಿದಂತೆ ಹೊಸ ಹೊಸ ಆಲೋಚನೆಯಿಂದಾಗಿ ಹೊಸ ಹೊಸ ಬೇಡಿಕೆಗಳು ಸಹ ದ್ವಿಗುಣಗೊಳ್ಳತೊಡಗಿದಾಗ ಅಂತಹ ಬೇಡಿಕೆಗಳನ್ನು ತಾವೇ ಉತ್ಪಾದಿಸಿಕೊಳ್ಳುವುದು ಅಸಾದ್ಯವಾಯಿತ್ತು. ಅನಿವಾರ್ಯವಾಗಿ ಅಗತ್ಯತೆಗಳು ಹೆಚ್ಚಾಗಿ, ಅವಲಂಬನೆ ಜಾಸ್ತಿಯಾಗತೊಡಗಿದಾಗ ಆಗ ಜನರು ತಮ್ಮ ಅಗತ್ಯಗಿಂತ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಿ ಹೆಚ್ಚುವರಿ ಪದಾರ್ಥಗಳನ್ನು ವಿನಿಮಯದ ಮೂಲಕ ಅಗತ್ಯವಿದ್ದ ಬೇರೆ ಪದಾರ್ಥಗಳನ್ನು ಬೇರೆಯವರಿಂದ ಪಡೆದುಕೊಳ್ಳಲಾರಂಭಿಸಿದರು. ಇದನ್ನು ವಸ್ತು ವಿನಿಮಯ ಪದ್ದತಿಯೆಂದು ಕರೆಯಲಾಗುತ್ತದೆ. ಪ್ರಾರಂಭದಲ್ಲಿ ಸಹಕಾರ ಹೆಚ್ಚಾಗಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಾಗಿತ್ತು.

18ನೇ ಶತಮಾನದಲ್ಲಿ ಜರುಗಿದ ಕೈಗಾರಿಕಾ ಕ್ರಾಂತಿಯಿಂದಾಗಿ ಸಮಾಜದಲ್ಲಿ ಹಾಗೂ ಮಾನವನ ಜೀವನ ಪದ್ದತಿ ಬದಲಾದಂತೆ ಸಹಕಾರ ಕ್ಷೇತ್ರವು ಸಹ ಮಾನವನ ಇಚ್ಛೆಯಂತೆ ಬದಲಾವಣೆಯಾಗಿ ಜಗತ್ತಿನಲ್ಲೆಡೆ ಹೆಮ್ಮರವಾಗಿ ಸಹಕಾರ ಕ್ಷೇತ್ರ ಬೆಳೆಯತೊಡಗಿತ್ತು. ಸಹಕಾರ ಚಳುವಳಿಯು ಜಗತ್ತಿನಾದ್ಯಂತ ಪಸರಿಸಿದಾಗ ಇದರ ಅಭಿವೃದ್ಧಿಗಾಗಿ ಮತ್ತು ಮಾರ್ಗದರ್ಶನ ಮಾಡುವ ಉದ್ದೇಶದಿಂದ ಸನ್ 1895 ರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ "ಅಂತರರಾಷ್ಟ್ರೀಯ ಸಹಕಾರ ಮೈತ್ರಿ" ಸಂಸ್ಥೆಯನ್ನು ಲಂಡನನಲ್ಲಿ ಸ್ಥಾಪನೆಗೊಂಡಿತು. ಈ ಸಂಸ್ಥೆಯು ರಾಕಡೈಲನ ಹಲವು ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತಿತ್ತು. 1921 ರಲ್ಲಿ ಜರುಗಿದ ಅಂತರರಾಷ್ಟ್ರೀಯ ಸಹಕಾರ ಮೈತ್ರಿಯ ಬಾಸ್ಲೆ ಕಾಂಗ್ರೆಸನಲ್ಲಿ ಸಹಕಾರ ಸಂಘಗಳು ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಜೋತೆ ಸೇರಬೇಕಾದರೆ ಅಂತಹ ಸಹಕಾರಿಗಳು ರಾಕಡೇಲ್ ತತ್ವಗಳಿಗೆ ಬದ್ಧವಾಗಿರಬೇಕೆಂಬ ಷರತ್ತನ್ನು ವಿಧಿಸಿತ್ತು. ಅಂತರರಾಷ್ಟ್ರೀಯ ಸಹಕಾರ ಮೈತ್ರಿಯು ರಾಕಡೇಲನ ಪ್ರಮುಖ ಏಳು ತತ್ವಗಳನ್ನು ಸಹಕಾರ ತತ್ವಗಳೆಂದು ಅಂಗಿಕರಿಸಿ ಎಲ್ಲಾ ರಾಷ್ಟ್ರಗಳು ಅಳವಡಿಸಿಕೊಳ್ಳಬೇಕೆಂದು ತಿಳಿಸಿತ್ತು. ಸನ್ 1937, 1966 ಮತ್ತು 1995 ರಲ್ಲಿ ಸಹಕಾರ ತತ್ವಗಳನ್ನು ವಿಮರ್ಶಿಸಿ ಪರಿಷ್ಕರಿಸಲಾದ ಈ ಏಳು ತತ್ವಗಳ ಆಧಾರದ ಮೇಲೆ ಸಹಕಾರ ಚಳುವಳಿಯನ್ನು ಬಲಪಡಿಸಲು ದಾರಿದೀಪವಾಗಿವೆ.

**ಸಹಕಾರ ತತ್ವಗಳು :**

1. ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ.
2. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
3. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಭಾಗವಹಿಸುವಿಕೆ
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ.
5. ಸಹಕಾರ ಶೀಕ್ಷಣ, ತರಬೇತಿ ಮತ್ತು ಪ್ರಚಾರ.
6. ಸಹಕಾರ ಸಂಘಗಳ ನಡುವೆ ಸಹಕಾರ
7. ಸಾಮಾಜಿಕ ಕಳಕಳಿ.

ಸಾರ್ವತ್ರಿಕವಾಗಿರುವ ಈ ಸಹಕಾರ ತತ್ವಗಳು ಸಹಕಾರ ಚಳುವಳಿಯ ಅಭಿವೃದ್ದಿಗೆ ದಾರಿದೀಪವಾಗಿವೆ. ಇವು ಸಹಕಾರ ಚಳುವಳಿಯ ಜೀವ ಮತ್ತು ಚಟುವಟಿಕೆಗಳನ್ನು ನಿಯಂತ್ರಿಸುವ ಸೂತ್ರಗಳಾಗಿವೆ. ತಲೆಮಾರುಗಳ ಅನುಭವ ಮತ್ತು ತತ್ವಜ್ಞಾನದ ಚಿಂತನೆಯಲ್ಲಿ ಹುಟ್ಟಿಬಂದಿರುವ ಈ ತತ್ವಗಳು ಸಹಕಾರ ಚಳುವಳಿಯನ್ನು ಪರಿಣಾಮಕಾರಿಯಾಗಿ ಬೆಳೆಯಲು ಅಗತ್ಯವಾಗಿವೆ.

ಸಹಕಾರ ಕ್ಷೇತ್ರದ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿ ಸಹಕಾರ ಚಳುವಳಿಯಲ್ಲಿ ಪಾಲುಗೊಳುವಿಕೆಗಾಗಿ ಅಂತರರಾಷ್ಟ್ರೀಯ ಸಹಕಾರ ಮೈತ್ರಿಯು ಸನ್ 1923 ರಿಂದ ಮೊದಲನೆ ಶನಿವಾರವನ್ನು ಅಂತರಾಷ್ಟ್ರೀಯ ಸಹಕಾರ ದಿನಾಚರನೆಯೆಂದು ಆಚರಿಸುತ್ತ ಬರುತ್ತಿದೆ. ಸನ್ 1995 ರಲ್ಲಿ ಅಂತರರಾಷ್ಟ್ರೀಯ ಸಹಕಾರ ಮೈತ್ರಿಯು (ಐ.ಸಿ.ಎ) ಯ ಶತಮಾನೋತ್ಸವದಂದು ಯುನೈಟೆಡ್ ನೇಷನ್ಸ್ ಜನರಲ ಅಸೆಂಬ್ಲಿಯಿಂದ ಅಧಿಕೃತವಾಗಿ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ವಾರ್ಷಿಕವಾಗಿ ಜುಲೈ ಮೋದಲನೇ ವಾರವನ್ನು ಘೋಷಿಸಲ್ಪಟ್ಟಿದೆ. ಈ ವರ್ಷದ ಅಂತರಾಷ್ಟ್ರೀಯ ಸಹಕಾರ ದಿನಾಚರಣೆ ಜುಲೈ 2 ಶನಿವಾರದಂದು ಜಗತ್ತಿನಲ್ಲಡೆ "ಸಹಕಾರಿ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸುತ್ತವೆ" ಎಂಬ ಧ್ಯೇಯ ವಾಕ್ಯದೊಂದಿಗೆ 100ನೇ ಅಂತರಾಷ್ಟ್ರೀಯ ಸಹಕಾರ ದಿನಾಚರಣೆ ಆಚರಿಸಲಾಗುತ್ತಿದೆ. ಈ ಐತಿಹಾಸಿಕ ಶತಮಾನದ ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ನಮ್ಮ ನಮ್ಮ ಸಹಕಾರಿಗಳಲ್ಲಿ ವಿಭಿನ್ನವಾಗಿ ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಆಚರಿಸುವುದರ ಮುಖಾಂತರ ಹೊಸಬರನ್ನು ಸಹಕಾರ ಚಳುವಳಿಯಲ್ಲಿ ಜೋಡಿಸಿ ಸಹಕಾರ ಕ್ಷೇತ್ರವನ್ನು ಬೆಳೆಸೋಣ.

# ಅಂತರಾಷ್ಟ್ರೀಯ ಸಹಕಾರ ದಿನ

## Theme -"Cooperatives Build a Better World" -"ಸಹಕಾರ ಸಂಸ್ಥೆಗಳು ಉತ್ತಮ ವಿಶ್ವ ನಿರ್ಮಾಣ ಮಾಡುತ್ತವೆ. "

– ಶ್ರೀಮತಿ ಸವಿತ ಎನ್. ಇ. ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಸಹಕಾರ ಕ್ಷೇತ್ರವು ಸಮಾಜದ ಎಲ್ಲಾ ಕ್ಷೇತ್ರಗಳಿಗೆ ಸಮಾಜದ ಸಾಮಾನ್ಯ ವ್ಯಕ್ತಿಯೂ ಸಹ ಸಹಕಾರ ಕ್ಷೇತ್ರದಿಂದ ಅನುಕೂಲ ಪಡೆದು, ಆ ಮೂಲಕ ತನ್ನ ಜೀವನವನ್ನು ರೂಪಿಸಿಕೊಂಡು ಅಭಿವೃದ್ಧಿ ಹೊಂದಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ನಂಬಿಕೆಯನ್ನು ಪುನಃಸ್ಥಾಪಿಸಲು ಮತ್ತು ಭರವಸೆಯನ್ನು ಪ್ರೇರೇಪಿಸಲು' ನಮಗೆ ಸಹಕಾರ ಬೇಕು, ಸಂವಾದ ಬೇಕು, ತಿಳುವಳಿಕೆ ಬೇಕು'. ಸುಮಾರು ಎರಡು ಶತಮಾನಗಳಿಂದ, ಸಹಕಾರಿ ಸಂಸ್ಥೆಗಳು ಈ ದಿಕ್ಕಿನಲ್ಲಿ ಬೆಳೆದಿವೆ. ಕರ್ಯನಿರ್ವಹಿಸುತ್ತ ಬಂದಿವೆ. ಸ್ವ–ಸಹಾಯ, ಸ್ವ–ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ಸಮಾನತೆ ಮತ್ತು ಐಕಮತ್ಯದ ಸಹಕಾರ ಮೌಲ್ಯಗಳಿಂದ ಪ್ರೇರಿತವಾದ ನಮ್ಮ ಮಾನವ–ಕೇಂದ್ರಿತ ವ್ಯವಹಾರ ಮಾದರಿ ಮತ್ತು ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ನೈತಿಕ ಮೌಲ್ಯಗಳಿಂದ ಹೇಗೆ ಪ್ರೇರಿತವಾಗಿದೆ ಎಂಬುದರ ಕುರಿತು ಎಲ್ಲೆಡೆ ಪ್ರಚಾರ ಮಾಡುತ್ತ ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ಕ್ಷೇತ್ರದ ಮತ್ತು ಕಾಳಜಿಯು ಉತ್ತಮ ಜಗತ್ತನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ.

### ಅಂತರಾಷ್ಟ್ರೀಯ ಸಹಕಾರಿ ದಿನದ ಹಿನ್ನಲೆ :

1995 ರಲ್ಲಿ ICA ಯ ಶತಮಾನೋತ್ಸವದಂದು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಿಂದ ಅಧಿಕೃತವಾಗಿ ಘೋಷಿಸಲ್ಪಟ್ಟಿದೆ, ಅಂತರರಾಷ್ಟ್ರೀಯ ಸಹಕಾರ ದಿನವನ್ನು ವಾರ್ಷಿಕವಾಗಿ ಜುಲೈ ಮೊದಲ ಶನಿವಾರದಂದು ಆಚರಿಸಲಾಗುತ್ತದೆ.

ವಿಶ್ವದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖವಾಗಿವೆ. ಸಹಕಾರದ ತತ್ವದ ಆಧಾರದ ಮೇಲೆ, ಸಹಕಾರಿ ಸಂಸ್ಥೆಗಳು ವ್ಯವಹಾರ ಮತ್ತು ಅರ್ಥಶಾಸ್ತ್ರದಲ್ಲಿ ಹೊಸ ನೀತಿ ಮತ್ತು ಮೌಲ್ಯಗಳನ್ನು ರಚಿಸಲು ಸಹಾಯ ಮಾಡುತ್ತದೆ. ಇಂಟರ್ ನ್ಯಾಷನಲ್ ಕೋ ಆಪರೇಟಿವ್ ಅಲೈಯನ್ಸ್ (ICA) ಸರ್ಕಾರೇತರ ಸಹಕಾರ ಒಕ್ಕೂಟವಾಗಿದೆ. ಇದು ಸಹಕಾರ ಸಂಘಗಳು ಮತ್ತು ವಿಶ್ವಾದ್ಯಂತ ಸಹಕಾರ ಚಳುವಳಿಯನ್ನು ಪ್ರತಿನಿಧಿಸುವ ಸಹಕಾರಿ ಒಕ್ಕೂಟವಾಗಿದೆ. ಎಡ್ವರ್ಡ್ ವ್ಯಾನ್ಸಿಟಾರ್ಟ್ ನೀಲ್ ಮತ್ತು ಇತರ ಸಮಾಜವಾದಿಗಳ ಕ್ರಮದ ಪರಿಣಾಮವಾಗಿ ಇದನ್ನು 1895 ರಲ್ಲಿ ಸ್ಥಾಪಿಸಲಾಯಿತು. 1927 ರಿಂದ, ಇದು ಜುಲೈ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸುತ್ತದೆ. 1994 ರಲ್ಲಿ ವಿಶ್ವಸಂಸ್ಥೆಯು ವಿಶ್ವದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖವೆಂದು ಗುರುತಿಸಿತು ಮತ್ತು ಪುನರುಚ್ಚರಿಸಿತು. UN ಜನರಲ್ ಅಸೆಂಬ್ಲಿ (16ನೇ ಡಿಸೆಂಬರ್ 1992 ರ ನಿರ್ಣಯ 47/90 ಅಡಿಯಲ್ಲಿ) ICA ಸ್ಥಾಪನೆಯ ಶತಮಾನೋತ್ಸವವನ್ನು ಗುರುತಿಸುವ ಮೂಲಕ ಜುಲೈ 1995ರ ಮೊದಲ ಶನಿವಾರವನ್ನು ಸಹಕಾರಿಗಳ ಅಂತರರಾಷ್ಟ್ರೀಯ ದಿನವೆಂದು ಘೋಷಿಸಿತು.

### ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಯ ಉದೇಶ ಹಾಗೂ ಗುರಿ :

ಸಹಕಾರಿಯ ದಿನದ ಗುರಿಯು ಸಹಕಾರಿಗಳ ಅರಿವನ್ನು ಹೆಚ್ಚಿಸುವುದು ಮತ್ತು ಅಂತರರಾಷ್ಟ್ರೀಯ ಒಗ್ಗಟ್ಟು, ಆರ್ಥಿಕ ದಕ್ಷತೆ, ಸಮಾನತೆ ಮತ್ತು ವಿಶ್ವ ಶಾಂತಿಯ ಚಳುವಳಿಯ ಕಲ್ಪನೆಗಳನ್ನು ಉತ್ತೇಜಿಸುವುದು. 1995 ರಿಂದ, ಸಹಕಾರಿಗಳ ಪ್ರಚಾರ ಮತ್ತು ಪ್ರಗತಿಗಾಗಿ ಸಮಿತಿ (COPAC) ಮೂಲಕ ICA ಮತ್ತು ಯುನೈಟೆಡ್ ನೇಷನ್ಸ್ ಜಂಟಿಯಾಗಿ ಸಹಕಾರಿಯ ದಿನದ ಆಚರಣೆಗಾಗಿ ಥೀಮ್ ಅನ್ನು ಹೊಂದಿಸಿವೆ. ಈ ನಿಟ್ಟಿನಲ್ಲಿ ಸಹಕಾರದ ಸಾಕಾರವನ್ನು ಸಮಾಜದ ಕಟ್ಟಕಡೆಯ ಪ್ರತಿಯೊಬ್ಬ ವ್ಯಕ್ತಿಗೆ ತಲುಪಬೇಕು ಅದರ ಸದುಪಯೋಗ ಪಡೆಯಬೇಕು. ಇಂತಹ ಹತ್ತು ಹಲವಾರು ಉತ್ತಮ ಉದ್ದೇಶಗಳನ್ನು ಹೊಂದಿರುವ ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು (International cooperative Alliance) ಪ್ರತಿ ವರ್ಷ ಜುಲೈ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವವನ್ನು ಉತ್ತಮ ಸ್ಥಳವನ್ನಾಗಿ ಮಾಡಲು ಸಹಕಾರಿಗಳ ಅನನ್ಯ ಕೊಡುಗೆಯನ್ನು ನೀಡಿದೆ. ಪ್ರಪಂಚದಾದ್ಯಂತ್ಯ ಸಹಕಾರಿಗಳು ಜುಲೈ 2 ರಂದು, 100ನೇ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸುತ್ತಿದ್ದೇವೆ. ಅಂತರಾಷ್ಟ್ರೀಯ ಸಹಕಾರಿ ವರ್ಷದ ಘೋಷಣೆ – "ಸಹಕಾರಿಗಳು ಉತ್ತಮ ಜಗತ್ತನ್ನು ನಿರ್ಮಿಸಿ"– ಅಂತರಾಷ್ಟ್ರೀಯ ವರ್ಷದ ಥೀಮ್‌ನ್ನು ಪ್ರತಿಧ್ವನಿಸುತ್ತದೆ. ನಮ್ಮ ಸಿದ್ಧಾಂತವು ಎಂದಿಗಿಂತಲೂ ಹೆಚ್ಚು ಮಾನ್ಯವಾಗಿದೆ ಮತ್ತು ಉತ್ತಮ ಜಗತ್ತನ್ನು ನಿರ್ಮಿಸಲು ಇದು ಪ್ರಮುಖವಾಗಿದೆ ಎಂದು ಜಗತ್ತಿಗೆ ತೋರಿಸಲು ಇದು ಖಂಡಿತವಾಗಿಯೂ ಅವಕಾಶವನ್ನು ನೀಡುತ್ತದೆ. ICA ಈ ದಿನಾಂಕವನ್ನು 1923 ರಲ್ಲಿ ಸ್ಥಾಪಿಸಿದ ನಂತರ ಇದು 100 ನೇ ಆವೃತ್ತಿಯಾಗಿದೆ. ಈ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2020-2022.



ಶತಮಾನೋತ್ಸವ ಆವೃತ್ತಿಯು ಸಹಕಾರಿಯ ಕ್ಷೇತ್ರಕ್ಕೆ ಹೆಮ್ಮೆಯನ್ನು ತಂದಿದೆ.

ಪ್ರಪಂಚದಾದ್ಯಂತದ ಸಹಕಾರಿ ಸಂಸ್ಥೆಗಳು ಅಂತರಾಷ್ಟ್ರೀಯ ಸಹಕಾರಿ ದಿನವನ್ನು ಹಲವು ವಿಧಗಳಲ್ಲಿ ಆಚರಿಸುತ್ತವೆ. ಇಂಟರ್ನ್ಯಾಷನಲ್ ಕೋ-ಆಪರೇಟಿವ್ ಅಲ್ಲೈಯನ್ಸ್ (ICA) ಮತ್ತು UN ನಿಂದ ಸಂದೇಶಗಳನ್ನು ವಿಶ್ವಾದ್ಯಂತ ವಿತರಣೆಗಾಗಿ ಸ್ಥಳೀಯ ಭಾಷೆಗಳಿಗೆ ಅನುವಾದಿಸಲಾಗಿದೆ. ದಿನದ ಜಾಗೃತಿಯನ್ನು ಪ್ರಚಾರ ಮಾಡುವ ಸುದ್ದಿ ಲೇಖನಗಳು ಮತ್ತು ರೇಡಿಯೋ ಕಾರ್ಯಕ್ರಮಗಳು, ಮೇಳಗಳು, ಪ್ರದರ್ಶನಗಳು, ಸ್ಪರ್ಧೆಗಳು ಮತ್ತು ಅಭಿಯಾನಗಳು ದಿನಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಕೇಂದ್ರೀಕೃತವಾಗಿವೆ. ಸರ್ಕಾರಿ ಅಧಿಕಾರಿಗಳು, ಯುಎನ್ ಏಜೆನ್ಸಿಗಳು ಮತ್ತು ಇತರ ಪಾಲುದಾರ ಸಂಸ್ಥೆಗಳೊಂದಿಗೆ ಸಭೆಗಳು, ಆರ್ಥಿಕ, ಪರಿಸರ, ಸಾಮಾಜಿಕ ಮತ್ತು ಆರೋಗ್ಯ ಸವಾಲುಗಳು (ಉದಾಹರಣೆಗೆ ಮರ ನೆಡುವಿಕೆ) ಮತ್ತು ರಂಗಮಂದಿರಗಳು ಮತ್ತು ಸಂಗೀತ ಕಚೇರಿಗಳಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸುವುದು.

### ಸಮಾಜಕ್ಕೆ ಸಹಕಾರ ಕ್ಷೇತ್ರದ ಕೊಡಿಗೆ

ಭಾರತ ದೇಶದ ಸಹಕಾರ ಚಳಿವಳಿ ವಿಶ್ವದಲ್ಲಿಯೇ ಗಾತ್ರದಲ್ಲಿ ದೊಡ್ಡದು, ಭಾರತಲದ ಅಮೂಲ್, ಇಫ್ಕೋ, ಕ್ರಿಬ್ಕೋ, ಕ್ಯಾಂಪ್ಕೋ ವಿಶ್ವಕ್ಕೆ ಮಾದರಿಯಾಗಿವೆ. ರವಿ ಕಾಣದ ಸೊಬಗಿಲ್ಲ- ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸದ ಕ್ಷೇತ್ರವೇ ಇಲ್ಲ. ವಿಶ್ವಾದ್ಯಂತ ಸಹಕಾರ ಚಳುವಳಿಯನ್ನು ಪ್ರತಿನಿಧಿಸುತ್ತದೆ. ವಿಶ್ವಾದ್ಯಂತ ಸಹಕಾರಿಗಳನ್ನು ಒಂದುಗೂಡಿಸಲು, ಪ್ರತಿನಿಧಿಸಲು ಮತ್ತು ಸೇವೆ ಸಲ್ಲಿಸಲು ಇದನ್ನು 1895 ರಲ್ಲಿ ಐಸಿಎ ಸ್ಥಾಪಿಸಲಾಯಿತು. ವಿಶ್ವದಾದ್ಯಂತ ಐಸಿಎ ಪ್ರಕಾರ 112 ದೇಶಗಳಲ್ಲಿ 318 ಸಹಕಾರ ಒಕ್ಕೂಟಗಳು ಮತ್ತು ಸಂಸ್ಥೆಗಳು ಪ್ರತಿನಿಧಿಸಿ ಕಾರ್ಯನಿರ್ವಹಿಸುತ್ತೀವೆ. ಇಂದು ಭಾರತದಲ್ಲಿ ಸಹಕಾರ ಆಂದೋಲನವು ವಿಶ್ವದಲ್ಲೇ ಅತಿ ದೊಡ್ಡದಾಗಿದೆ. ಆಂದೋಲನವು ಜೀವನದ ಎಲ್ಲಾ ಕ್ಷೇತ್ರಗಳನ್ನು ವ್ಯಾಪಿಸಿದೆ ಅಂದರೆ, ಕೃಷಿ, ತೋಟಗಾರಿಕೆ, ಸಾಲ ಮತ್ತು ಬ್ಯಾಂಕಿಂಗ್, ವಸತಿ, ಕೃಷಿ-ಕೈಗಾರಿಕೆಗಳು, ಗ್ರಾಮೀಣ ವಿದ್ಯುದ್ದೀಕರಣ, ನೀರಾವರಿ, ನೀರು ಕೊಯ್ಲು, ಕಾರ್ಮಿಕರು, ದುರ್ಬಲ ವರ್ಗಗಳು, ಡೈರಿ, ಗ್ರಾಹಕರು, ಸಾರ್ವಜನಿಕ ವಿತರಣಾ ವ್ಯವಸ್ಥೆ, ಆದಿವಾಸಿಗಳು, ಅಂತರಾಷ್ಟ್ರೀಯ ವ್ಯಾಪಾರ, ರಫ್ತು, ಕೃಷಿ-ವ್ಯವಹಾರ, ಮಾನವ ಸಂಪನ್ಮೂಲ ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ. ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ಛಾಪು ಮೂಡಿಸಿದೆ.

ಸಹಕಾರಿ ದಿನದ ಮೂಲಕ, ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ನೀತಿ ನಿರೂಪಕರು, ನಾಗರಿಕ-ಸಮಾಜ ಸಂಸ್ಥೆಗಳು ಮತ್ತು ಸಾಮಾನ್ಯವಾಗಿ ಸಾರ್ವಜನಿಕರು ಎಲ್ಲರಿಗೂ ಸುರಕ್ಷಿತ ಭವಿಷ್ಯಕ್ಕಾಗಿ ಸಹಕಾರಿಗಳ ಕೊಡುಗೆಯನ್ನು ನೀಡುತ್ತಾ ಬಂದಿದೆ. ಸಹಕಾರ ಕ್ಷೇತ್ರವು ಪ್ರಪಂಚದಾದ್ಯಂತ ಕಾರ್ಯನಿರ್ವಹಿಸುತ್ತಿರುವ, ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ, ಸಹಕಾರಿ ಸಂಸ್ಥೆಗಳು ಸರಾಸರಿಗಿಂತ ಬಿಕ್ಕಟ್ಟುಗಳಿಗೆ ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಸಾಬೀತುಪಡಿಸಿವೆ. ಅವರು ಆರ್ಥಿಕ ಭಾಗವಹಿಸುವಿಕೆಯನ್ನು ಬೆಳೆಸುತ್ತಿದೆ. ಪರಿಸರ ಅವನತಿ ಮತ್ತು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡುತ್ತಿದೆ. ಉತ್ತಮ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಆಹಾರ ಭದ್ರತೆಗೆ ಕೊಡುಗೆ ನೀಡುತ್ತದೆ. ನೈತಿಕ ಮೌಲ್ಯ ಸರಪಳಿಗಳನ್ನು ನಿರ್ಮಿಸುತ್ತದೆ. ಜನರ ವಸ್ತು ಪರಿಸ್ಥಿತಿಗಳು ಮತ್ತು ಭದ್ರತೆಯನ್ನು ಸುಧಾರಿಸುವ ಮೂಲಕ ಧನಾತ್ಮಕ ಶಾಂತಿಗೆ ಕೊಡುಗೆ ನೀಡುತ್ತದೆ. ಸಹಕಾರ ಸಂಸ್ಥೆಗಳು ಜಾಗತಿಕವಾಗಿ ಒಪ್ಪಿದ ತತ್ವಗಳನ್ನು ಹೊಂದಿರುವ ಏಕೈಕ ಸಹಕಾರಿ ಕ್ಷೇತ್ರವು ಮಾದರಿಯಾಗಿದ್ದು, ಸಹಕಾರ ತತ್ವಗಳ ಸಮಪಾಲು ಸಮಬಾಳು ಹಂಚಿಕೆಯ ನೈತಿಕ ಮೌಲ್ಯಗಳ ಅಡಿಪಾಯದ ಮೇಲೆ ನಿಂತಿದೆ. ರಾಷ್ಟ್ರೀಯ ಸರ್ಕಾರಗಳು ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಸಾಮಾಜಿಕ ನ್ಯಾಯ, ಸಮಾನತೆ, ಸೇರ್ಪಡೆ ಮತ್ತು ಒಗ್ಗಟ್ಟನ್ನು ಉತ್ತೇಜಿಸುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ನಿರ್ಮಿಸಲು ಸಹಕಾರಿ ಕ್ಷೇತ್ರ ಮಾದರಿ ಕ್ಷೇತ್ರವಾಗಿದೆ ಎಂಬುದನ್ನು ಗೌರವಿಸುವುದು ಹಾಗೂ ಹೆಮ್ಮೆ ತರುವ ವಿಷಯವಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055 ದೂ : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080-23449933/34
ಇ-ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ-ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055 ದೂ: 080-23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821-2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015 ದೂರವಾಣಿ: 0831-2401551.
ಕಲಬುರಗಿ ಪಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ - 585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010